ಶ್ರೀ ಹೆಚ್.ಡಿ. ದೇವೇಗೌಡ: ಈ ವಿಷಯವಾಗಿ ಇನ್ನೆರಡು ದಿವಸಗಳಲ್ಲಿ ಸದನದಲ್ಲಿ ಪೂರ್ಣ ಮಾಹಿತಿಯನ್ನು ಮಂಡಿಸುವುದಕ್ಕೆ ನಾವು ಸಿದ್ಧರಿದ್ದೇವೆ.

## ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ವಿಷಯ: ರಾಜ್ಯದಲ್ಲಿ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ಕಡೆ ನಡೆದ ಗಲಭೆಗಳ ಬಗ್ಗೆ

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: (ಗುರುಮಿಠ್‌ಕಲ್): ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ವಿಷಯವನ್ನು ಪ್ರಸ್ತಾಪ ಮಾಡುವ ಆರಂಭದಲ್ಲಿ ಆ ಕಡೆಯ ಸದಸ್ಯರುಗಳು ಸಾಕಷ್ಟು ಗಲಾಟೆ ಮಾಡುತ್ತಿದ್ದರು. ಯಾವ ದುರುದ್ದೇಶದಿಂದ ಇದನ್ನು ಮಾಡಿಸಿದ್ದುದು, ಇದಕ್ಕೆ ನೀವೇ ನೇರವಾಗಿ ಜವಾಬ್ದಾರರು ಅಥವಾ ಈ ಮಂತ್ರಿಗಳು ಹೋಗಿ ಮಾಡಿಸಿದ್ದಾರೆ ಎಂದಲ್ಲ. ಈ ಗಲಾಟೆಗಳು ಗೋಕಾಕ್‌ನಲ್ಲಾಗಿರಬಹುದು. ಕೋಲಾರದಲ್ಲಾಗಿರಬಹುದು. ಮಧುಗಿರಿಯಲ್ಲಾಗಿರಬಹುದು. ದಕ್ಷಿಣ ಕನ್ನಡದಲ್ಲಾಗಿರಬಹುದು. ಗಂಡಸಿಯಲ್ಲಾಗಿಬಹುದು. ಅನೇಕ ಕಡೆಯಾಗಿದೆ. ಇದಕ್ಕೆ ಕಾರಣವೇನು? ಡಿಸೆಂಬರ್ 12ನೇ ತಾರೀಖು ತಾವು ಅಧಿಕಾರ ವಹಿಸಿಕೊಂಡ ನಂತರ ಅನೇಕ ಕಡೆ ವಿಶೇಷವಾಗಿ ಬಡವರು ವಾಸಿಸುವ ಪ್ರದೇಶಗಳಲ್ಲಿ ಅವರ ಮನೆಗಳ ಮೇಲೆ ದಾಳಿ ಮಾಡಿ ಹಲ್ಲೆ ನಡೆಸಿದ್ದು, ಕೆಲವು ಕಡೆ ಕೊಲೆಯಾಗಿದೆ. ಕೆಲವು ಕಡೆ ಮನೆಗಳಲ್ಲಿ ಲೂಟಿ ಸಹ ಮಾಡಿದ್ದಾರೆ. ಗಲಭೆಕೋರರು ಎಲ್ಲಿಯವರೆಗೆ ಹೋಗಿದ್ದಾರೆಂದರೆ ಅವರಿಗೆ ಒಂದು ರೀತಿಯ ಕುಮ್ಮಕ್ಕು ಇದೆಯೆಂದು ಹೇಳಬೇಕೋ ಅಥವಾ ಯಾವುದೇ ಒಂದು ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಸರ್ಕಾರದ ಬೆಂಬಲ ನಮಗೆ ಇದೆಯೆಂದು ಹೇಳಿಕೊಂಡು ಮಾಡಿದ್ದಾರೆಂದು ಹೇಳಬೇಕೋ ಗೊತ್ತಾಗುತ್ತಿಲ್ಲ. ಈ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಬಹುಶಃ ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರುವಂತೆ, ಅವರ ಮತಕ್ಷೇತ್ರದಲ್ಲಿಯೂ ಕೂಡ ಕೆಲವು ಕಡೆ ಗಲಭೆಗಳು ನಡೆದಿವೆ. Crime No.331/94 – one Sri Channasiddaiah, Ex–Chairman along with six other followers went near the residence of M. Narayana, uttered provocative words, attacked the house, destroyed the tiles and looted in Ramanagaram.

ಇನ್ನೊಂದು ಕ್ರೈಮ್ ಸಂಖ್ಯೆ 334:94 ಮತ್ತೊಂದು 332:94. ಇವೆಲ್ಲಾ ಘಟನೆಗಳು ಚುನಾವಣೆ ಹಾಗೂ ಮುಖ್ಯಮಂತ್ರಿಗಳ ಆಯ್ಕೆ ಪ್ರಕ್ರಿಯೆಯಾದ ನಂತರ ಅದೇ ಮತ ಕ್ಷೇತ್ರದಲ್ಲಿ ನಡೆದಿರುವಂಥಾದ್ದು. ಮತ್ತು ಈ ಸಂಬಂಧವಾಗಿ ತೆಗೆದಿರುವ ಕೆಲರು ಫೋಟೋಗಳಿದ್ದು ಅದನ್ನು ಮಾನ್ಯ ಅಧ್ಯಕ್ಷರೇ ತಮಗೆ ಕಳುಹಿಸಿಕೊಡುತ್ತೇನೆ.

ಯಾವ ರೀತಿಯಾಗಿ ಆ ಮನೆಗಳ ಲೂಟಿ ಮಾಡಿದ್ದಾರೆ, ಯಾವ ರೀತಿಯಾಗಿ ಅವರು ಅಲಮಾರುಗಳನ್ನು ಅಲ್ಲಿರತಕ್ಕ ಬಂಗಾರ, ಬೆಳ್ಳಿಯನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ ಮತ್ತು ಯಾವ ರೀತಿಯಾಗಿ ಹೆಣ್ಣು ಮಕ್ಕಳಿಗೂ ಕೂಡ ಹೊಡೆದಿದ್ದಾರೆ ಎನ್ನತಕ್ಕದ್ದು ಇದರಲ್ಲಿ ಸ್ಪಷ್ಟವಾಗಿದೆ. ಆದರೆ ಇಷ್ಟೆಲ್ಲಾ ಆದರೂ ಕೂಡ, ಕೇಸ್ ರಿಜಿಸ್ಟರ್ ಆದರೂ ಕೂಡ ಒಬ್ಬರನ್ನೂ ಸಹ ಇದುವರೆಗೆ ಅರೆಸ್ಟ್ ಮಾಡಿಲ್ಲ. ಕಾರಣ ಏನು? ನಾನು ಕೇಳುತ್ತೇನೆ. ಏಕೆಂದರೆ ನ್ಯಾಯ ಎಲ್ಲರಿಗೂ ಸಿಗಬೇಕು. ನಾನು ಪ್ರಭಾವಶಾಲಿ ಇದ್ದೇನೆ ಅಥವಾ ನಾನು ಮಂತ್ರಿಯಾಗಿದ್ದಾಗ ನನ್ನ ಕ್ಷೇತ್ರದಲ್ಲಿ ನಡೆದಾಗ ತಾವು ಹೇಳಬಹುದು. ಇದು ಅನ್ಯಾಯ ಎಂದು ಅದೇ ರೀತಿಯಾಗಿ ತಾವು ಇವತ್ತಿನ ದಿವಸ ಮುಖ್ಯಮಂತ್ರಿಯಾದಾಗ ನಿಮ್ಮ ಮತ ಕ್ಷೇತ್ರದಲ್ಲಿ ಇದು ನಡೆದಾಗ, ಅವರು ಯಾರೇ ಇರಬಹುದು; ತಕ್ಷಣ ಅರೆಸ್ಟ್ ಮಾಡಿ, ಕಾನೂನು ಪ್ರಕಾರ ಕ್ರಮವನ್ನು ತೆಗೆದುಕೊಂಡರೆ ಎಲ್ಲರಿಗೂ ಒಂದು ವಿಶ್ವಾಸ

ಮೂಡುತ್ತದೆ. ಯಾರಾದರೂ ಕೂಡ ಕಾನೂನು ಬಿಟ್ಟು ನಡೆದುಕೊಂಡರೆ, ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡರೆ, ಅವರಿಗೆ ಶಿಕ್ಷೆ ಸಿಗುತ್ತದೆ ಎನ್ನತಕ್ಕ ನಂಬಿಕೆ ಹುಟ್ಟುತ್ತದೆ. ಅದಕ್ಕೆ ಕೇವಲ ನಿಮ್ಮನ್ನು ದೂರಬೇಕು ಅಥವಾ ನೀವು ಮಾಡಿಸಿದ್ದೀರಿ ಎಂದು ನಾನು ಹೇಳುತ್ತಿಲ್ಲ. ಆದರೂ ಈ ಕುಮ್ಮಕ್ಕು ಇವತ್ತೇ ಏಕೆ ಬಂತು ? ಕೇವಲ ಈ ಎಂಟು ದಿವಸದಲ್ಲಿಯೇ ಈ ಘಟನೆ ನಡೆಯುತ್ತಿದೆ ? ಅದೂ ವಿಶೇಷವಾಗಿ ವೀಕರ್ ಸೆಕ್ಷನ್ಸ್ ಲೊಕಾಲಿಟಿಯಲ್ಲಿಯೇ ಏಕೆ ನಡೆಯುತ್ತಿದೆ ? ಇದಕ್ಕೆ ಏನು ಕಾರಣ ? ಇದಕ್ಕೆ ಯಾರು ಕಾರಣ ಎನ್ನತಕ್ಕದ್ದನ್ನು ತಾವು ಕೂಡ ವಿಚಾರ ಮಾಡಬೇಕಾಗಿದೆ.ಮಾನ್ಯ ಅಧ್ಯಕ್ಷರೆ, ನಿಮ್ಮಲ್ಲಿ ಇದನ್ನು ನಾನು ಕಳಿಸುತ್ತೇನೆ. ಇದರಲ್ಲಿ ಅನೇಕ ಮನೆಗಳನ್ನು ಲೂಟಿ ಮಾಡಿದ್ದುದು, ಹೆಂಚು ತೆಗೆದುಹಾಕಿದ್ದುದು, ಅವರ ಬಂಗಾರಗಳನ್ನು ತೆಗೆದುಕೊಂಡಿದ್ದುದು. ಇದನ್ನು ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ತೋರಿಸಿ. ಇದರ ಜೊತೆಯಲ್ಲಿಯೇ ಚಿಂತಾಮಣಿಯಲ್ಲಿಯೂ ಕೂಡ ಒಂದು ಘಟನೆ ಆಗಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಅಧಿಕಾರ ಸ್ವೀಕರಿಸುವ ಹಿಂದಿನ ದಿನ ನಾವು ಪತ್ರಿಕೆಯಲ್ಲಿ ಓದಿದ್ದು. ಮಹಾ ಮುತ್ಸದ್ದಿ ರಾಜಕಾರಣಿ ಮಾನ್ಯ ಹೆಗಡೆಯವರಿಗೆ ಚಪ್ಪಲಿಯಲ್ಲಿ ಹೊಡೆದರು ......

ಅಧ್ಯಕ್ಷರು: ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅದೇ ರೀತಿಯಾಗಿ ಗೋಕಾಕ್‌ನಲ್ಲಿ ನಡೆದಿರತಕ್ಕ ಘಟನೆ ಇದೆ. ತಮಗೆ ಗೊತ್ತಿದೆ. ಅದರ ಬಗ್ಗೆ ಮಾನ್ಯ ಕೌಜಲಗಿಯವರು ವಿಶೇಷವಾಗಿ ಪ್ರಸ್ತಾಪ ಮಾಡಲಿದ್ದಾರೆ. ಅದು ಯಾವ ರೀತಿಯಾಗಿ ಘಟನೆ ನಡೆಯಿತು.

ಅಲ್ಲಿಯಾ ಕೂಡ ಎರಡು ಕೊಲೆ ಆಯಿತು. ಕೊನೆಗೆ ಮಾಜಿ ಶಾಸಕರನ್ನು ಹಾಗೂ ಅವರ ಜೊತೆ **80–90** ಜನರನ್ನು ಅರೆಸ್ಟ್ ಮಾಡಿದರು. ನೀವು ಅರೆಸ್ಟ್ ಮಾಡಿ, ಯಾರು ಕಾನೂನು ಭಂಗ ಮಾಡುತ್ತಾರೋ, ಯಾರು ಕಾನೂನಿಗೆ ವಿರೋಧವಾಗಿ ನಡೆದುಕೊಳ್ಳುತ್ತಾರೆ. ಅವರು ಕಾಂಗ್ರೆಸ್ ಇರಲಿ, ಜನತಾ ದವರು ಇರಲಿ, ಬಿಜೆಪಿ ಅವರು ಇರಲಿ, ಯಾವುದೇ ಪಾರ್ಟಿಯವರು ಇರಲಿ, ನೀವು ಶಿಕ್ಷೆ ಕೊಡಿ. ಆದರೆ ಕೆಲವು ಜನರನ್ನು ಯಾರು ನಿರಪರಾಧಿಗಳು ಇದ್ದಾರೆ ಅಥವಾ ಯಾರು ಇದರಲ್ಲಿ ಇನ್‌ವಾಲ್ವ್ ಇಲ್ಲ. ಕೇವಲ ನಿಮ್ಮ ವಿರುದ್ಧವಾಗಿ ಅವರು ಪ್ರಚಾರ ಮಾಡಿದ್ದಾರೆ ಅಥವಾ ನಿಮಗೆ ಸಹಾಯ ಮಾಡಲಿಲ್ಲ ಅಥವಾ ನಿಮ್ಮ ಸಪೋರ್ಟಿಗೆ ಬರಲಿಲ್ಲ. ನಿಮ್ಮ ಸಪೋರ್ಟರ್ಸ್ ಆಗಿ ಇರಲಿಲ್ಲ ಎನ್ನುವ ಕಾರಣಕ್ಕೆ ನೀವು ಈ ರೀತಿಯಾದ ಕ್ರಮವನ್ನು ತೆಗೆದುಕೊಂಡರೆ ಖಂಡಿತವಾಗಿ ಇದರಿಂದ ನೀವು ಒಂದು ಒಳ್ಳೆಯ ಆಡಳಿತವನ್ನು ಕೊಡುತ್ತೀರಿ ಎನ್ನತಕ್ಕ ನಂಬಿಕೆ ನನಗಂತೂ ಹುಟ್ಟುವುದಿಲ್ಲ. ಎರಡನೆಯದಾಗಿ ಚಿಂತಾಮಣಿಯಲ್ಲಿ ಕೂಡ ಘಟನೆ ನಡೆದಿದೆ. ಕೋಲಾರ ಜಿಲ್ಲೆಯಲ್ಲಿ, ಅದು ಕೂಡ ಮಧುಗಿರಿಯಲ್ಲಿ ಘಟನೆ ನಡೆದಿದೆ ಮತ್ತು ಗಂಡಸಿಯಲ್ಲಿ ಕೂಡ, ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಾಗಿರಬಹುದು. ಏಕೆಂದರೆ ಅದು ಅವರ ಜಿಲ್ಲೆಯೇ. ಅದರ ಬಗ್ಗೆ ನಮ್ಮ ಮಾನ್ಯ ಶಿವರಾಮು ಅವರು ಪ್ರಸ್ತಾಪ ಮಾಡುತ್ತಾರೆ. ಅನೇಕ ಹಳ್ಳಿಗಳಲ್ಲಿ, ಸುಮಾರಾಗಿ ಬೇಲೂರು ಮತ್ತು ಗಂಡಸಿಯಲ್ಲಿ ಅನೇಕ ಹಳ್ಳಿಗಳಲ್ಲಿ ಘಟನೆ ನಡೆದಿದೆ. ನಿನ್ನೆ ಜಿಗಣಿಯಲ್ಲಿ ಮಾನ್ಯ ವೈ. ರಾಮಕೃಷ್ಣ ಅವರ ಕ್ಷೇತ್ರದಲ್ಲಿ ಘಟನೆ ನಡೆದಿದೆ. ಪತ್ರಿಕೆಯಲ್ಲಿ ಈ ವಿಚಾರ ಬಂದಿದೆ. ಹೀಗೆ ಹಲವಾರು ಹಳ್ಳಿಗಳಲ್ಲಿ, ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಇವತ್ತಿನ ದಿವಸ ಇಂತಹ ಒಂದು ಘಟನೆ ನಡೆದಿದೆ. ಅದಕ್ಕಾಗಿ ಈ ವಿಷಯ ಬಹಳ ಪ್ರಾಮುಖ್ಯವಾಗಿದೆ. ಇದನ್ನು ಚರ್ಚೆ ಮಾಡುವುದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕು. ಇಲ್ಲ, ಏನಾಗುತ್ತದೆ ಎಂದರೆ ಕಾನೂನು ವ್ಯವಸ್ಥೆ ಸರಿ ಇಲ್ಲದೇ ಹೋದರೆ ಅಥವಾ ಈ ಸರ್ಕಾರದಲ್ಲಿ ಜನಕ್ಕೆ ನಂಬಿಕೆ ಹುಟ್ಟದೇ ಹೋದರೆ ಖಂಡಿತವಾಗಿ ಇವತ್ತಲ್ಲ ನಾಳೆ ನಿಮ್ಮನ್ನು

ನೇರವಾಗಿ ದೂಷಣೆ ಮಾಡಿ ಹೇಳಬೇಕಾಗುತ್ತದೆ. ಇದಕ್ಕೇ ನೀವು ನೇರವಾಗಿ ಕುಮ್ಮಕ್ಕು ಕೊಡುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ಅದಕ್ಕಾಗಿ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಲು ಅವಕಾಶವನ್ನು ತಾವು ಮಾಡಿಕೊಡಬೇಕು. ಇದು ಮಹತ್ವವಾದ ವಿಷಯ ಮತ್ತು ಬಹಳ ಅರ್ಜೆಂಟಾಗಿ ಕೂಡ ಇದೆ. ಅದಕ್ಕಾಗಿ ನಮ್ಮ ಬೇರೆ ವಿಷಯಗಳನ್ನು ಬದಿಗಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ನಾನು ಕಳಕಳಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಖರ್ಗೆಯವರು ಎತ್ತಿರತಕ್ಕಂಥ ವಿಚಾರ ಏನಿದೆ ನಿಮ್ಮ ವಿಷಯ ಏನು ಅಂತ ನೀವು ಸರಿಯಾಗಿ ಪ್ರಸ್ತಾಪವನ್ನು ಸಭೆಯ ಮುಂದೆ ಇಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಿಮಗೆ ಅವಕಾಶ ಇದೆ ಆ ಮೇಲೆ ನೀವು ಉತ್ತರ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ: ನಮ್ಮ ಬೇಡಿಕೆ ಇರತಕ್ಕಂಥಾದ್ದು ಸ್ಪೀಕರ್‌ರವರು ಒಪ್ಪಿಗೆ ಕೊಡಬೇಕು ಎನ್ನತಕ್ಕಂಥಾದ್ದು. ಆಗಲೇ ಸರ್ಕಾರದವರು ಉತ್ತರ ಕೊಡಲಿಕ್ಕೆ ಹೊರಟರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ನಾನು ಸ್ವಲ್ಪ ದಿವಸ ವಿರೋಧ ಪಕ್ಷದಲ್ಲಿ ಕೆಲಸ ಮಾಡಿದ್ದೇನೆ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಖರ್ಗೆಯವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಎಲ್ಲಾ ಸಿಗ್ನೇಚರೀಸ್‌ಗೂ ತಾವು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುವುದಾದರೆ ಬಹಳ ದೀರ್ಘವಾಗಿ ಚರ್ಚೆ ಇದಾಗುತ್ತದೆ. ಆದುದರಿಂದ ಇದು ಬಹಳ ಮುಖ್ಯವಾದ ವಿಚಾರ. ಇದರ ಬಗ್ಗೆ ಚರ್ಚೆಗೆ ತಾವು ಅವಕಾಶ ಮಾಡಿ ಕೊಡಿ. ನಿಮಗೆ ಆಡಳಿತ ಪಕ್ಷದಿಂದ ಅಥವಾ ಸರ್ಕಾರದಿಂದ ಯಾವುದೇ ತಕರಾರು ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಸನ್ಮಾನ್ಯ ಸಚಿವರು ಉತ್ತರ ಕೊಡುವ ಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಬಹುದೆಂದು ಹೇಳಿದ್ದಾರೆ. ಅವರು ಆಡಳಿತ ಪಕ್ಷದವರು ಒಪ್ಪಿಕೊಂಡ ಮೇಲೆ ತಾವು ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ಮಂಡಿಸುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು. ಅವರು ಜವಾಬ್ದಾರಿಯುತ ಸಚಿವರು. ಅವರು ವಿರೋಧ ಪಕ್ಷದಲ್ಲಿ ಕೆಲಸ ಮಾಡಿದಂತಹವರು. ಈಗ ಆಡಳಿತ ಪಕ್ಷದಲ್ಲಿ ಇದ್ದು ಜವಾಬ್ದಾರಿಯುತ ಸಚಿವರು ಉತ್ತರ ಕೊಟ್ಟ ಮೇಲೆ ಬಹುಶಃ ಇನ್ನು ಮುಂದೆ ಇದರ ಬಗ್ಗೆ ಚರ್ಚೆ ಅನಾವಶ್ಯಕ ಎಂದು ಅಭಿಪ್ರಾಯ ಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನನ್ನ ಕೆಲಸವನ್ನು ಗೃಹಸಚಿವರು ಮಾಡುವುದಕ್ಕಾಗುವುದಿಲ್ಲ. ತಾವು ವಕೀಲರು ಕುಳಿತುಕೊಳ್ಳಿ.

ಶ್ರೀ ವಿ.ಎಸ್. ಕೌಜಲಗಿ: ಸನ್ಮಾನ್ಯ ಅಧ್ಯಕ್ಷರೇ, ಮೊದಲು ತಮ್ಮಲ್ಲಿ ಪ್ರಾರ್ಥನೆ ಏನೆಂದರೆ, ತಾವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು. ಏನು ಅವಕಾಶ ಕೊಡಬೇಕೆಂದರೆ, ಇಲ್ಲಿ ಇರತಕ್ಕಂಥಹ ಮೈಕನ್ನು ಕಿತ್ತು ಹಾಕಿದ್ದಾರೆ. ಮೈಕು ತೆಗೆದು ಬಿಡಿ.

ಅಧ್ಯಕ್ಷರು: ವಾಟಾಳ್ ನಾಗರಾಜ್‌ರವರು ಅಲ್ಲಿ ಕುಳಿತಿದ್ದಾಗ ಕಿತ್ತು ಹೋಗಿದೆ ಎಂದು ಕಾಣುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನೀವು ಕೇಳಬೇಕು ಇಲ್ಲವೇ ಸಿಂಧ್ಯರವರು ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್: ನಾನಾಗಲಿ, ಸಿಂಧ್ಯಾ ಆಗಲಿ ಅದನ್ನು ಕಿತ್ತಿಲ್ಲ. ನೀವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಅಲ್ಲಿ ಕುಳಿತಿದ್ದಿರಲ್ಲ ಆಗ ಕಿತ್ತಿರಬಹುದು.

ಶ್ರೀ ವಿ.ಎಸ್. ಕೌಜಲಗಿ: ಸನ್ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕರು ತಿಳಿಸಿದಂತಹ ನಿಲುವಳಿ ಸೂಚ

ಬಗ್ಗೆ ಅಂದರೆ ಗೋಕಾಕ್‌ನಲ್ಲಿ ನಡೆದಂತಹ ಘಟನೆ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. 13ನೇ ಡಿಸೆಂಬರ್‌ನಲ್ಲಿ ಗೋಕಾಕ್‌ನಲ್ಲಿ ಎರಡು ಕಾರ್ಮಿಕ ಸಂಘಗಳ ನಡುವೆ ಘರ್ಷಣೆ ಶುರುವಾಗಿ ಹೊಡೆದಾಟ, ಬಡಿದಾಟ ಆಯಿತು. ಅದು 11 ರಿಂದ 16ನೇ ತಾರೀಖಿನವರೆಗೆ 144ನೇ ಕಲಂ ಜಾರಿಯಲ್ಲಿದ್ದಾಗ್ಯೂ 14ನೇ ತಾರೀಖಿನ ದಿವಸ ಈ ಕಾರ್ಮಿಕರ ಸಂಘಟನೆಯ ಜನ ಗೋಕಾಕ್ ಊರಿನಲ್ಲಿ ಬಂದು ಏನು ಭಯೋತ್ಪಾದನೆ ಮಾಡತಕ್ಕಂತಹ ಜನರ ರೀತಿಯಲ್ಲಿ ವರ್ತನೆ ಮಾಡಿ ಅಲ್ಲಿರತಕ್ಕಂತಹ ಪೆಟ್ರೋಲ್ ಬಂಕಿಗೆ ಬೆಂಕಿ ಹಚ್ಚಿದರು. ಅದೇ ಸ್ಥಳದಲ್ಲಿ ಖಾನ್ ಅನ್ನುವವರು ಸಣ್ಣ ಉದ್ಯೋಗ ಮಾಡಿ ಉಪಜೀವನ ಮಾಡತಕ್ಕಂತಹ ವ್ಯಕ್ತಿಯ ಮನೆಗೆ ನುಗ್ಗಿ ಅಲ್ಲಿರತಕ್ಕಂತಹ ಕಾರುಗಳನ್ನು ಸುಟ್ಟು ಹಾಕಿದರು. ಅಲ್ಲಿರತಕ್ಕಂಥ ಟಿ.ವಿ. ವಿ.ಸಿ.ಆರ್. ಸುಟ್ಟು ಹಾಕಿದರು. ಅದೂ ಅಲ್ಲದೆ ಒಂದು ಹೆಜ್ಜೆ ಮುಂದೆ ಹೋಗಿ ಮನೆಯಲ್ಲಿರತಕ್ಕ ಹೆಣ್ಣುಮಕ್ಕಳ ಮೈಮೇಲೆ ಇರತಕ್ಕಂಥ ಬಂಗಾರವನ್ನು ತೆಗೆದುಕೊಂಡರು. ಅವರ ಆಫೀಸನ್ನು ನುಚ್ಚುನೂರು ಮಾಡಿದರು. ಅದರ ನಂತರ ಅದೇ ಗುಂಪು ಊರಿನಲ್ಲಿ ಬಂದು ಪೇಟೆಯಲ್ಲಿರತಕ್ಕಂತಹ ಅಂಗಡಿ ಪ್ರತ್ಯೇಕವಾಗಿ ಒಂದೇ ಇರತಕ್ಕಂಥ ಅಂಗಡಿ, ಆ ಅಂಗಡಿಗೆ ನುಗ್ಗಿ ಸುಮಾರು 10 ಲಕ್ಷ ರೂಪಾಯಿಗಳ ಬಟ್ಟೆಯನ್ನು ತೆಗೆದುಕೊಂಡು ಹೋಧರು. ಎಲ್ಲರೂ ಕರಿ ಮುಖವಾಡ ಹಾಕಿಕೊಂಡು ಕೈಯಲ್ಲಿ ಖಡ್ಗ ಹಿಡಿದುಕೊಂಡು, ಕೈಯಲ್ಲಿ ಕಬ್ಬಿಣದ ಸಲಾಕಿ ಹಿಡಿದುಕೊಂಡು ಜನರಿಗೆ ಹೆದರಿಸಿ ಕೊಂಡು ಬಂದರು. ಆದರೆ ಅಲ್ಲಿ ಪೋಲಿಸ್‌ನವರು ಯಾರೂ ಏನೂ ಮಾಡಲಿಲ್ಲ. ಏಕೆಂದರೆ ಪೋಲೀಸ್‌ನವರ ಸಂಖ್ಯೆ ಇರಲಿಲ್ಲ. ಹೀಗಾಗಿ ಜನ ಭಯೋತ್ಪಾದನೆಯಿಂದ ತತ್ತರಿಸಿ ಹೋಗಿಬಿಟ್ಟಿದ್ದಾರೆ.

ಇದು ಏಕೆ ಆಯಿತು ? ಈ ಸರ್ಕಾರ ಬಂದನಂತರ ಇಂತಹುದಕ್ಕೆ ಅವಕಾಶ ಇದೆಯೇ ? ಅಥವಾ ಈ ರೀತಿ ಮಾಡಿರಿ ಎನ್ನುವ ಪ್ರಚೋದನೆ ಇದೆ ಏನು ? ನೀವು ಇದರ ಮೇಲೆ ಏನೊಂದೂ ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ನಮ್ಮ ಮಾನ್ಯ ಮಂತ್ರಿಗಳಾದ ಕೌಜಲಗಿವರು ಬಂದರು. ಅವರೂ ಸಹ ಬರೀ ಲಿಪ್ ಸಿಂಪಥಿ ತೋರಿಸಿದರು. ಆಯಿತು ಪರಿಶೀಲನೆ ಮಾಡುವಾ ಎಂದರು. ಇಷ್ಟು ಲುಕ್ಸಾನು ಆದರೂ ಸಹ ತಕ್ಷಣ ಪರಿಹಾರದ ವ್ಯವಸ್ಥೆ ಏನೂ ಆಗಲಿಲ್ಲ. ಪರಿಶೀಲನೆ ಮಾಡೋಣ ಹೇಳುತ್ತೇನೆ ಎಂದು ಬಂದರು. ಅದರಂತೆ ಶ್ರೀಮತಿ ಲೀಲಾದೇವಿ ಪ್ರಸಾದ್ ಅವರು ಸಹ ಬಂದರು. ಅವರೂ ಸಹ ಇದನ್ನೇ ಹೇಳಿದರು. ಆದರೆ ಇವತ್ತು ಜನರಿಗೆ ನಿತ್ಯ ಜೀವನ ನಡೆಸಬೇಕಾದರೆ ಅವರಿಗೆ ಏನಾದರೂ ಒಂದು ಆಶ್ವಾಸನೆ ಅಥವಾ ನಿರ್ಭಯದಿಂದ ಕೆಲಸ ಮಾಡುವಂತಹ ವಾತಾವರಣ ನಿರ್ಮಾಣ ಮಾಡಿಕೊಡುವಂತಹ ಕಾರ್ಯಕ್ರಮ ಇನ್ನೂ ಈ ಸರ್ಕಾರದ ವತಿಯಿಂದ ಆಗಿಲ್ಲ. ಅದಕ್ಕೆ ಸಂಪೂರ್ಣವಾಗಿ ಮೂರು ದಿವಸ ನಡೆದಂತಹ ಘಟನೆ ಏನಿದೆ ಈ ಘಟನೆಯನ್ನು ಸಿಓಡಿಯಿಂದ ತನಿಖೆ ಮಾಡಿಸಿ, ಅದರ ಮೇಲೆ ಯೋಗ್ಯ ಪರಿಹಾರ ಆ ಜನರಿಗೆ ಕೊಡಬೇಕು. ಅವರು ಶಾಂತಿ ರೀತಿಯಿಂದ ನೆಲೆಸಬೇಕು. ನೆಮ್ಮದಿಯಿಂದ ಬಾಳಬೇಕು ಮತ್ತು ತಮ್ಮ ವ್ಯಾಪಾರ ವ್ಯವಹಾರವನ್ನು ಮಾಡಿಕೊಂಡು ಹೋಗಬೇಕು ಎನ್ನುವ ದೃಷ್ಟಿಯಿಂದ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಇವತ್ತು ತಾರೀಖು 29 ಇದೆ. ಇಲ್ಲಿಯವರೆಗೆ ಏನೂ ಕ್ರಮ ಇಲ್ಲ. ಮಾನ್ಯ ಮಂತ್ರಿಗಳು ಬಂದು ಈ ವಿಷಯವಾಗಿ ಏನು ಹೇಳಿದರು ಮತ್ತು ಏನು ಕ್ರಮ ತೆಗೆದುಕೊಂಡು ಹೋಗಬೇಕಾಗಿದೆ. ಅದಕ್ಕೆ ನನ್ನ ಕಳಕಳಿಯ ಪ್ರಾರ್ಥನೆ ಏನೆಂದರೆ, ತಕ್ಷಣ ಸರಿಯಾದ ಕ್ರಮ ಕೈಗೊಂಡು ಅಲ್ಲಿರುವ ಜನರು ನಿರ್ಭಯವಾಗಿ ತಮ್ಮ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಅಸ್ಪದ ಮಾಡಿಕೊಡಬೇಕು ಮತ್ತು ಇದರಲ್ಲಿ ಯಾರೇ ತಪ್ಪಿತಸ್ಥರು ಇದ್ದರೂ ಕೂಡ ಅವರು ಯಾರೇ ಇರಲಿ, ಕಾಂಗ್ರೆಸ್‌ನವರೆ ಇರಲಿ ಅಥವಾ ಜನತಾ ಪಕ್ಷದವರೆ ಇರಲಿ, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಈ ಪ್ರಸ್ತಾವನೆ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಇವತ್ತು ನಾನು ನಿರ್ದಿಷ್ಟವಾಗಿ ಯಾವುದೇ

ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ತಮ್ಮ ಮುಂದೆ ಅವಕಾಶ ಇರತಕ್ಕಂಥಾದ್ದು ಏನೆಂದರೆ ಈ ನಿಲುವಳಿ ಸೂಚನೆಯನ್ನು ಮಂಡನೆ ಮಾಡಿರತಕ್ಕಂಥಾದ್ದು ಅದಕ್ಕೆ ನಮಗೆ ......

ಅಧ್ಯಕ್ಷರು:– ನಿಲುವಳಿ ಸೂಚನೆ ಎಂದರೆ ನಿರ್ದಿಷ್ಟವಾಗಿ ಇರತಕ್ಕಂಥಾದ್ದನ್ನೇ ಪ್ರಬಲವಾಗಿ ಪ್ರಸ್ತಾಪ ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ:– ನಾನು ಯಾವುದೋ ವಿಷಯವನ್ನೋ ಅಥವಾ ಯಾವುದೋ ಒಂದು ಘಟನೆಯ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ. ದಯಮಾಡಿ ತಾವು ಕೇಳಬೇಕು. ನಿಲುವಳಿ ಸೂಚನೆಯಲ್ಲಿ ತಂದಿರತಕ್ಕಂಥಾದ್ದಕ್ಕೆ ಬೆಂಬಲವಾಗಿ ನಾನು ಮಾತನಾಡುವುದಕ್ಕೆ ಹೋಗುತ್ತಿದ್ದೇನೆ. ತಾವು ಸಭಾಧ್ಯಕ್ಷರು ಇದ್ದಂತಹ ಸಮಯದಲ್ಲಿ ನಮಗೆ ಮಾತಾನಾಡುವುದಕ್ಕೆ ಅವಕಾಶವಾಗಲಿಲ್ಲ. ನನ್ನ ವಯಸ್ಸಿನಷ್ಟೇ ಇರತಕ್ಕಂಥ 45 ವರ್ಷ ಯುವಕರು ಅಧ್ಯಕ್ಷರಾಗಿರುವುದಕ್ಕೆ ನಾವು ನಿಜವಾಗಲೂ ಕೂಡ ಹೆಮ್ಮೆಪಡುತ್ತಿದ್ದೇವೆ. ನೀವು ನಮ್ಮ ಕಡೆ ನೋಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು:– ದಯಮಾಡಿ ತಾವು ಕುಳಿತುಕೊಳ್ಳಿ. ನನ್ನ ಕಷ್ಟ ಏನೆಂದರೆ, ತಾವು ಯುವಕರು, ನಾವು ಯುವಕರು, ನಾವೆಲ್ಲಾ ಸೇರಿ ಹುಡುಗಾಟ ಆಡುತ್ತಿದ್ದೇವೆ ಎಂದು ಆಗಬಾರದು. ಈ ಸೂಚನೆ ಏನು ಕಳಿಸಿದ್ದೀರಿ, ಇದು ಏನು ಓದುತ್ತದೆ ಎಂದರೆ ಮಾನ್ಯರೆ ಅತೀ ಪ್ರಾಮುಖ್ಯವಾದ ಮತ್ತು ನಿರ್ದಿಷ್ಟವಾದ ಈ ಕೆಳಕಂಡ ವಿಷಯದ ಬಗ್ಗೆ ಚರ್ಚಿಸಲು ಅನುಮತಿ ಕೊಡಿ ಎಂದು ಇದೆ. ಎತ್ತಿಕೊಳ್ಳುತ್ತಲೇ ನೀವೇ ಪ್ರಾರಂಭ ಮಾಡಿಬಿಟ್ಟರೆ, ನಿರ್ದಿಷ್ಟವಾಗಿ ಏನು ಎಂದು ಹೇಳುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ನಾನು ವಿಷಯದ ಘಟನೆ ಬಗ್ಗೆ ಪ್ರಾರಂಭ ಮಾಡುತ್ತಿಲ್ಲ. ನಿಲುವಳಿ ಸೂಚನೆಯ ಬೆಂಬಲವಾಗಿ ನಾನು ಮಾತನಾಡುವುದಕ್ಕೆ ಹೋಗುತ್ತಿದ್ದೇನೆ. ಸಭಾಧ್ಯಕ್ಷರ ಗಮನಕ್ಕೆ ವಿಶೇಷವಾದಂತಹ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿದ್ದೇನೆ. ಇನ್ನಾದರೂ ನಿಲುವಳಿ ಸೂಚನೆಯನ್ನು ತರತಕ್ಕಂಥ ಉದ್ದೇಶ ಏನೆಂದು ತಾವು ಅರ್ಥಮಾಡಿಕೊಳ್ಳಬೇಕು. ಬದಲಾಗಿರತಕ್ಕಂಥ ರಾಜಕೀಯ ಪರಿಸ್ಥಿತಿಯಲ್ಲಿ ಜನತಾದಳ ಸರ್ಕಾರ ಅಧಿಕಾರವನ್ನು ಮಾಡುತ್ತಿದೆ. ಈ ರಾಜ್ಯದಲ್ಲಿ, ಈ ಸಭೆಯಲ್ಲಿ ಬಹಳ ಅನುಭವ ಇರತಕ್ಕಂಥ ಸನ್ಮಾನ್ಯ ದೇವೇಗೌಡರು ಇವತ್ತು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಸ್ವೀಕಾರ ಮಾಡಿದ್ದಾರೆ. ಜನರ ತೀರ್ಪಿಗೆ ನಾವೆಲ್ಲರೂ ಕೂಡ ತಲೆಬಾಗಿದ್ದೇವೆ. ಆದರೆ ಇವರ ಹಿಂದೆ ಅನೇಕ ಸರ್ಕಾರಗಳು ಬಂದು ಹೋಗಿವೆ. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದಿರುವಂತಹ ಸಂದರ್ಭದಲ್ಲಿ ಪ್ರಾರಂಭದಲ್ಲಿ ಆ ಸಂತೋಷವನ್ನು ವ್ಯಕ್ತಪಡಿಸತಕ್ಕಂಥಾದ್ದು, ಇವೆಲ್ಲಾ ಎಲ್ಲಾ ಪಕ್ಷದವರು ಮಾಡಿರತಕ್ಕಂಥಾದ್ದೆ. ಆದರೆ ಇವತ್ತು ಆಗಿರುವುದೇನೆಂದರೆ, ಸ್ವಲ್ಪ ಅದಕ್ಕೆ ತದ್ವಿರುದ್ಧವಾದಂತಹ ಪರಿಸ್ಥಿತಿ ಆಗಿದೆ. ಅವತ್ತು ಸಂತೋಷವನ್ನು ತೋರ್ಪಡಿಸಿಕೊಳ್ಳುವುದರ ಜೊತೆಗೆ ಆ ಸಂತೋಷದ ಭರದಲ್ಲಿ, ಕೆಲವು ದುಷ್ಟ ಶಕ್ತಿಗಳು ಆ ಅವಕಾಶವನ್ನು ಉಪಯೋಗಿಸಿಕೊಂಡು ದೌರ್ಜನ್ಯಗಳನ್ನು ಮಾಡುತ್ತಿವೆ, ಕೊಲೆಗಳಾಗುತ್ತಿದೆ, ಸುಲಿಗೆಗಳಾಗುತ್ತಿವೆ ಎನ್ನುವ ವಿಷಯವನ್ನು ನಾನು ಮುಖ್ಯವಾಗಿ ಪ್ರಸ್ತಾಪ ಮಾಡುತ್ತಿರತಕ್ಕಂಥಾದ್ದು. ಸರ್ಕಾರ ಬದಲಾದ ತಕ್ಷಣ ಅವರ ಸಂತೋಷಪಡಬೇಕಾಗಿರತಕ್ಕಂಥ ಸಂದರ್ಭದಲ್ಲಿ ಇಂತಹ ಸುಲಿಗೆಗಳು ಆಗತ್ಯಂಥಾದ್ದು, ಇದು ಯಾರಿಗೂ ಕೂಡ ಒಳ್ಳೆಯ ಹೆಸರು ಬರತಕ್ಕಂಥಾದ್ದು ಅಲ್ಲ. ಹೆಚ್ಚಿನ ಜವಾಬ್ದಾರಿಕೆ ಇರತಕ್ಕಂಥ ಸಚಿವರು ಸನ್ಮಾನ್ಯ ದೇವೇಗೌಡರು ಈ ಸಭೆಯ ಹಿರಿಯ ನಾಯಕರಾಗಿರತಕ್ಕಂಥವರು ಮುಖ್ಯಮಂತ್ರಿಯಾಗಿದ್ದಾರೆ. ಅವರಿಗೂ ಕೂಡ ಅದು ಶೋಭೆ ತರತಕ್ಕಂಥಾದ್ದಲ್ಲ. ಅದು ಒಳ್ಳೆಯ ಹೆಸರು ತರತಕ್ಕಂಥಾದ್ದಲ್ಲ. ಇವತ್ತು ಯಾವುದೇ ಪಕ್ಷದವರಾಗರು ನಾವು ಕೇವಲ ಜನತಾ ದಳದ ಕಾರ್ಯಕರ್ತರು ಕಾಂಗ್ರೆಸ್ ಮೇಲೆ ಹಲ್ಲೆ ಮಾಡುತ್ತಿದ್ದಾರೆ. ಲೂಟಿ ಮಾಡುತ್ತಿದ್ದಾರೆ ಎನ್ನುವುದಕ್ಕಿಂತ ಹೆಚ್ಚಾಗಿ ಇವತ್ತು ಬಿಜೆಪಿಯಾವರು ಬೇರೆ ಕಡೆ ಮಾಡುತ್ತಿರಬಹುದು. ಅದನ್ನು ನಾನು ಹೇಳುತ್ತಿಲ್ಲ.

ಯಾವ ಪಕ್ಷದವರೇ ಇದ್ದರೂ ಕೂಡ ಮಾಡತಕ್ಕಂಥಾದ್ದು ತಪ್ಪು ಎನ್ನುವ ವಿಷಯವನ್ನು ನಾನು ಹೇಳುತ್ತಿದ್ದೇನೆ. ಇದು ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿದೆ. ನಾನು ಆರೋಪ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಇವತ್ತು ಬಿ.ಜೆ.ಪಿಯವರೂ ಕೂಡ ಬೇರೆ ಕಡೆ ಮಾಡುತ್ತಾ ಇರಬಹುದು. ಅದನ್ನು ನಾನು ಹೇಳುತ್ತಿಲ್ಲ. ಯಾವ ಪಕ್ಷವಾದರೂ ಅದನ್ನು ಮಾಡತಕ್ಕದ್ದು ತಪ್ಪು ಎನ್ನುವಂಥ ವಿಷಯವನ್ನು ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ವಿಷಯ ಸರ್ಕಾರದ ಗಮನಕ್ಕೂ ಈಗಾಗಲೇ ಬಂದಿದೆ. ದಯಮಾಡಿ,.....

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ:– ಕ್ರಿಯಾಲೋಪವಿದೆ, ನಿರ್ದಿಷ್ಟವಾಗಿ ಹೇಳಿಬಿಡಿ, I am on a Point of Order.

ಶ್ರೀ ಟಿ.ಬಿ. ಜಯಚಂದ್ರ:– ದಯಮಾಡಿ ನಂಜೇಗೌಡರೆ, ನಾನು ಇದನ್ನು ಮುಗಿಸಿ ಬಿಡುತ್ತೇನೆ. ನಾನು ಆರೋಪ ಮಾಡುತ್ತಿಲ್ಲ. ಇವತ್ತಿನ ಪರಿಸ್ಥಿತಿಯ ಬಗ್ಗೆ ಹೇಳುತ್ತಿರುವಂಥಾದ್ದು.

ಅಧ್ಯಕ್ಷರು:– ಮಾನ್ಯ ನಂಜೇಗೌಡರು ಕ್ರಿಯಾಲೋಪವೆತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು:– ಇವರು ಬಿಟ್ಟರೆ ಯಾರು ಯಾರನ್ನೋ ಮುಗಿಸಿಬಿಡುತ್ತಾರೆ. ಇವರು ಸದ್ಯಕ್ಕೆ ಮುಗಿಸುವುದಿಲ್ಲ. ದಯಮಾಡಿ ಸಬ್ಜೆಕ್ಟ್ ಮುಗಿಸುವುದಕ್ಕೆ ಹೇಳಿ. ಸುಮ್ಮನೆ ಬಿ.ಜೆ.ಪಿ ಎಲ್ಲರನ್ನು ಮುಗಿಸುವುದಕ್ಕೆ ಹೊರಟಿದ್ದಾರೆ.

(ಗೊಂದಲ)

SRI H.N. NANJE GOWDA:– If you allow I will talk. I am on a Point of Order.

ಶ್ರೀ ಸುರೇಶ್‌ಕುಮಾರ್:– ಇವರು ನಿರ್ದಿಷ್ಟವಾಗಿ ಯಾರ ಮೇಲೂ ಅಪಾದನೆ ಮಾಡುವುದಿಲ್ಲ? ಎಂದು ಹೇಳಿ ಯಾರ ಮೇಲಾದರೂ ಮಾಡಬಹುದೆಂದು ಮಾತನಾಡುತ್ತಿದ್ದಾರೆ.

ಸಭಾಧ್ಯಕ್ಷರು:– ಮಾನ್ಯ ಜಯಚಂದ್ರರವರೆ ಸನ್ಮಾನ್ಯ ನಂಜೇಗೌಡರು ಕ್ರಿಯಾಲೋಪ ಎತ್ತಿದ್ದಾರೆ. ಕ್ರಿಯಾಲೋಪವೆತ್ತಿದಾಗ You have to yield.

ಶ್ರೀ ಹೆಚ್.ಎನ್. ನಂಜೇಗೌಡ:– ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಿರ್ದಿಷ್ಟವಾದ ವಿಚಾರದ ಬಗ್ಗ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ. ಅದನ್ನು ಏಕೆ ಅಲೊ ಮಾಡಬೇಕು. ಅಂಥ ಪುಷ್ಟೀಕರಿಸುವುದಕ್ಕೆ ಇವರು ವಾದಗಳನ್ನು ಮುಂದಿಡಬೇಕು. ಹೊಸ ವಿಚಾರಗಳ ಬಗ್ಗೆ ತರುವ ಹಾಗಿಲ್ಲ. ಇವರು ಪ್ರಾಸಂಗಿಕವಾಗಿ ಬಿ.ಜೆ.ಪಿ. ಅಂದದ್ದರಿಂದ ಹೇಳುತ್ತಿದ್ದೇನೆ. ಬಿ.ಜೆ.ಪಿಯವರು ಎಲ್ಲಾದರೂ ದೌರ್ಜನ್ಯ ನಡೆಸಿದ್ದರೆ, ಸರ್ಕಾರದ ಸಹಾಯವಿಲ್ಲದೆ ನಾವೇ ಅವರನ್ನು ಸುಮ್ಮನೆ ಇರಿಸುತ್ತೇವೆ. ಅಂಥದ್ದು ಇದ್ದರೆ ನಿರ್ದಿಷ್ಟವಾಗಿ ಹೇಳಿ. ಹೀಗೆ ಎಲ್ಲಾ ಅಪಾದನೆ ಮಾಡಿ ಹೇಳುವುದು ಸೂಕ್ತವಲ್ಲ. It is irrelevant, it is out of order. It should not go on record.

ವಿಸ: 29–12–94 12.05 (14ಎ0

ಶ್ರೀ ಟಿ.ಬಿ. ಜಯಚಂದ್ರ:- ನನ್ನ ಉದ್ದೇಶವೇನೆಂದರೆ ನಾನು ಹೇಳತಕ್ಕದ್ದು ತಾವು ಅರ್ಥ ಮಾಡಿಕೊಳ್ಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನನ್ನದೊಂದು ಕ್ರಿಯಾಲೋಪ, ಮಾನ್ಯ ನಂಜೇಗೌಡರು ಮಾತನಾಡುವಾಗ ಹೇಳಿದರು. ಅವರು ಬಹಳ ಹಿರಿಯ ಸದಸ್ಯರು. ಅವರು 1967ರಲ್ಲಿ ನಮ್ಮ ಜೊತೆಯಲ್ಲಿದ್ದರು. 1972ರಲ್ಲಿ ಪಾರ್ಲಿಮೆಂಟ್‌ಗೆ ಹೋದರು. ಈಗ ಈ ಕಡೆ ಬಂದಿದ್ದಾರೆ. ಬಿ.ಜೆ.ಪಿ.ಗೆ ಇಷ್ಟೊಂದು ಪುಷ್ಟಿ ಮಾಡತಕ್ಕಂಥದ್ದು ಸಂತೋಷ ಅವರು ಅದನ್ನು ಮಾಡಲೇಬೇಕು. ಈಗ ನಾನು ಹೇಳುತ್ತೇನೆ. ತಾವು ನಾಲ್ಕು ಜನರು ಇದ್ದವರು ಈಗ 40 ಜನರು ಬಂದಿದ್ದೀರಿ. ಮಾನ್ಯ ಜಯಚಂದ್ರರವರು ಹೇಳುವಾಗ ಮಾತಿನ ದಾಟಿಯಲ್ಲಿ ಬಿ.ಜೆ.ಪಿ ಎನ್ನುವ ಪದ ಬಂದುದ್ದಕ್ಕೆ ಒಟ್ಟಿಗೆ ನಾಲ್ಕು ಜನ ನಿಂತು ಬಿ.ಜೆ.ಪಿ ತೆಗೆಯಿರಿ ಎಂದರೆ ಇದು ಏನು ಪರಿಸ್ಥಿತಿ, ತಾಳ್ಮೆ ಇರಬೇಕು. ನಿಮಗೆ ಕೇಳತಕ್ಕಂಥ ಸೌಜನ್ಯವಿರಬೇಕು. ಏಕದಂ ಎದ್ದು ಬಿಟ್ಟು ಕ್ರಿಯಾಲೋಪ ಎತ್ತಿ ಬಿಟ್ಟು ಪದ ತೆಗೆಯಿರಿ ತೆಗೆಯಿರಿ ಎಂದರೆ ಪರಿಸ್ಥಿತಿ ಏನು? ನೀವು ನಾಳೆ ಹೇಳುವುದು ಏನು ನಾವು ಸರ್ಕಾರ ರಚನೆ ಮಾಡುತ್ತೇವೆ. ಸರ್ಕಾರಕ್ಕೆ ಬರುತ್ತೇವೆ ಎಂದು ಏನು ಏನೋ ಮಾತನಾಡಿಕೊಳ್ಳುತ್ತಿದ್ದೀರಿ. ನಿಮಗೆ ಸ್ವಲ್ಪ ಸಾವಧಾನ ಇರಲಿ. ಮಾನ್ಯ ನಂಜೇಗೌಡರಂಥವರು ಸಾವಧಾನ ಬಿಟ್ಟರೆ ನಮ್ಮ ಪರಿಸ್ಥಿತಿ ಹೇಗೆ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ತಾವು ಆಡಳಿತ ಸೂತ್ರವನ್ನು ಹಿಡಿಯುತ್ತಿದ್ದೀರಿ. ನಾನು ಹೇಳುತ್ತಿರತಕ್ಕಂಥದ್ದು ಏನೆಂದರೆ ನಾನು ಬಿ.ಜೆ.ಪಿಯ ಮೇಲೆ ಆರೋಪ ಮಾಡುತ್ತಿಲ್ಲ. ಯಾರು ಯಾವ ಪಕ್ಷವಾದರೂ ಕೂಡ ಹಿಂಸಾಕೃತ್ಯಕ್ಕೆ ತೊಡಗಬಾರದು ಎನ್ನುವಂಥ ದೃಷ್ಟಿಯಿಂದ ಇಂಥ ವಿಷಯ ಪ್ರಾಮುಖ್ಯವಾಗಿ ಚರ್ಚೆಯಾಗಬೇಕು. ನಿಲುವಳಿ ಸೂಚನೆ ಅಡ್‌ಮಿಟ್ ಮಾಡುವುದರಿಂದ ಈ ವಿಷಯಕ್ಕೆ ಹೆಚ್ಚಿನ ಮಹತ್ವ ಬರುತ್ತದೆ ಎನ್ನುವ ದೃಷ್ಟಿಯಿಂದ ನಾನು ವಾದವನ್ನು ಮುಂದಿಡುತ್ತಿದ್ದೇನೆ. ಇದು ಆಡಳಿತ ಪಕ್ಷದ ದೃಷ್ಟಿಯಿಂದ, ಸರ್ಕಾರದ ದೃಷ್ಟಿಯಿಂದ ಒಳ್ಳೆಯದಾಗುತ್ತದೆ ಎನ್ನುವ ದೃಷ್ಟಿಯಿಂದ ನಿಲುವಳಿ ಸೂಚನೆಯನ್ನು ಕೊಟ್ಟಿರುವುದನ್ನು ತಾವು ಒಪ್ಪಬೇಕು ಮತ್ತು ನಿರ್ದಿಷ್ಟವಾದಂತಹ ನಮ್ಮ ಕ್ಷೇತ್ರಗಳ ಆಗಿರುವಂತಹ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಅವಕಾಶ ಮಾಡಬೇಕು. ದಯಮಾಡಿ ತಾವು ಇದನ್ನು ಒಪ್ಪಬೇಕು ಮತ್ತು ತಾವು ನನ್ನ ನೆರವಿಗೆ ಬರಬೇಕೆಂದು ನಾನು ತಮ್ಮನ್ನು ಕೇಳುತ್ತೇನೆ.

ಶ್ರೀ ಎನ್. ಬಸವಯ್ಯಾ:- ಮಾನ್ಯ ಅಧ್ಯಕ್ಷರೆ, .....

ಅಧ್ಯಕ್ಷರು:- ಶ್ರೀಮಾನ್ ಬಸವಯ್ಯನವರ ತಾವು ದಯಮಾಡಿ ಕುಳಿತುಕೊಳ್ಳಿ You are not a signatory.

ಶ್ರೀ ಹೆಚ್.ಡಿ. ದೇವೇಗೌಡ:- ಈಗ ವಿರೋಧಪಕ್ಷದ ಕಾಂಗ್ರೆಸ್ (ಐ) ಮುಖಂಡರು ಆಗಿರುವಂತಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ರಾಜ್ಯದಲ್ಲಿ ಕಳೆದ 15 ದಿವಸಗಳಲ್ಲಿ ನಡೆದಿರುವಂತಹ ಗಲಭೆಗಳು, ಹಿಂಸಾಚಾರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ ಅದರ ವ್ಯಾಪ್ತಿಯಲ್ಲಿ ಚರ್ಚೆ ಮಾಡಬೇಕೆಂದು ಹೇಳಿ ತಮ್ಮ ಅನುಮತಿಯನ್ನು ಕೇಳಿದ್ದಾರೆ.

ತಾವು ಅನುಮತಿ ಕೊಡಬೇಕು ಎಂದು ಹೇಳಿ ಕೆಲವು ವಿವರಗಳನ್ನು ಕೊಟ್ಟು ಅದನ್ನು ಪುಷ್ಟೀಕರಣ ಮಾಡುತ್ತಿದ್ದಾರೆ. ಅದರ ಬಗ್ಗೆ ನನ್ನ ಅಭ್ಯಂತರವಿಲ್ಲ. ನನಗೆ ತಿಳಿದಹಾಗೆ, ಕಾನೂನು, ನಮ್ಮ ಸಭಾ ನಿಯಮಾವಳಿಗಳ ಪ್ರಕಾರ ಲಾ ಅಂಡ್ ಆರ್ಡರ್ ವಿಷಯವನ್ನು ನಿಲುವಳಿ ಸೂಚನೆ ವ್ಯಾಪ್ತಿಯಲ್ಲಿ

ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಹಲವಾರು ರೂಲಿಂಗ್‌ಗಳನ್ನು; ಒಂದು ನಿಮಿಷ ನಾನು ಮಾತನಾಡುತ್ತಿದ್ದೇನೆ ನಾನು ಯಾರ ಬಗ್ಗೆಯೂ ಅಗೌರವವಾಗಿ ನಡೆದುಕೊಳ್ಳುವುದಕ್ಕೆ ಸಿದ್ಧನಿಲ್ಲ. ಈ ಸದನದಲ್ಲಿ ಯಾರೇ ಹೇಳಿದರೂ ತಲೆಬಾಗಿ ಕೇಳಲಿಕ್ಕೆ ಸಿದ್ಧನಿದ್ದೇನೆ. ನಾನು ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ. ಹಲವಾರು ರೂಲಿಂಗ್‌ಗಳನ್ನು ಸದನದ ಬಗ್ಗೆ, ಇಂತಹ ವಿಷಯವನ್ನು ಸದನದಲ್ಲಿ ಚರ್ಚೆ ಮಾಡುವುದರ ಬಗ್ಗೆ ಹಿಂದೆ ತಮ್ಮ ಸ್ಥಾನದಲ್ಲಿ ಕುಳಿತು ನಿರ್ಣಯ ಕೊಟ್ಟಿರತಕ್ಕಂಥ ಘಟನೆಗಳನ್ನು ನಾನು ತಮಗೆ ಹೊಸದಾಗಿ ಹೇಳಬೇಕಾಗಿಲ್ಲ. ತಮಗೆ ಅದರ ಜ್ಞಾಪಕವಿರಬಹುದು ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅದರ ಜೊತೆಗೆ Shut out ಮಾಡಬೇಕೆನ್ನುವ ಪ್ರಶ್ನೆ ಇಲ್ಲ. ರಾಜ್ಯಪಾಲರ ವಂದನಾನಿರ್ಣಯ ಇದೆ. ಅದರ ಮೇಲೆ ಮಾತನಾಡುವಾಗ ಎಲ್ಲಾ ವಿಷಯವನ್ನು ನೀವು ತರಬಹುದು ಇದರ ಬಗ್ಗೆ ಯಾರದು ಏನೂ ಅಡ್ಡಿಆತಂಕ ಇಲ್ಲ. ರಾತ್ರಿ ಹತ್ತು ಗಂಟೆಯಾಗಲೀ ಕುಳಿತುಕೊಂಡು ಕೇಳುತ್ತೇವೆ. ಈ ಸಭೆಯನ್ನು ಬಿಟ್ಟು ಹೊರಗೆ ಹೋಗುವುದಕ್ಕೆ ನಾನು ಸಿದ್ಧನಿಲ್ಲ ಇಲ್ಲೇ ಇರುತ್ತೇನೆ. ಆದ್ದರಿಂದ ಈ ರಾಜ್ಯದಲ್ಲಿ ಏನೇನು ನಡೆದಿದೆಯೋ ಕೇವಲ ಸಿಗ್‌ನೇಟರಿಸ್ ಎನ್ನುವ ಪ್ರಶ್ನೆಯಲ್ಲ. ಅನೇಕ ಕ್ಷೇತ್ರಗಳಲ್ಲಿ ನಡೆದಿರಬಹುದು. ದಯಮಾಡಿ ಸಾಕಷ್ಟು ಅವಕಾಶ ಕೊಡಿ. ಈ ವಿಷಯ ಸುದೀರ್ಘವಾಗಿ ಚರ್ಚೆಯಾಗಲಿ, ಸರ್ಕಾರ ಕೂಡ ಎಲ್ಲಾ ಮಾಹಿತಿಯನ್ನು ತರಿಸಿ ಸಭೆಯ ಮುಂದಿಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅಷ್ಟಕ್ಕೆ ಕ್ರಿಯಾಲೋಪ ತೆಗೆದುಕೊಳ್ಳುವುದು ಬೇಡ. ಏಕೆಂದರೆ ಇವತ್ತು, ನಾಳೆ ನಾಡಿದ್ದು ಮೂರೇ ದಿನ. ಮೊನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತಾವು ನಿರ್ಣಯ ತೆಗೆದುಕೊಂಡಿದ್ದೀರಿ. ಇದೇ ವಿಷಯದ ಬಗ್ಗೆ ಚರ್ಚೆಮಾಡುವುದಕ್ಕೆ ರಾಜ್ಯಪಾಲರ ನಿರ್ಣಯದಲ್ಲಿ ಸಾಧ್ಯತೆ ಇದೆ. ಹಿಂದೆ ರೂಲಿಂಗ್ ಕೊಟ್ಟಿರುವುದರ ಬಗ್ಗೆಯೂ ನಾನು ತಾವು ಅದೇ ರೂಲಿಂಗ್‌ನ್ನು ಇವತ್ತು ಕೊಡಬೇಕು ಎಂದು ಒತ್ತಾಯ ಮಾಡುವುದಿಲ್ಲ. ಆದರೆ ಒಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈ ಹೊಸ ಹತ್ತನೇ ವಿಧಾನ ಸಭೆಯ ಅಧಿವೇಶನ ಪ್ರಾರಂಭ ಆದ ಮೇಲೆ ನಾವೆಲ್ಲರೂ ಒಟ್ಟಾಗಿ ಸೇರಿ ಕೆಲವು ನಿಯಮಗಳನ್ನಾದರೂ ಪಾಲಿಸೋಣ ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಇದರಲ್ಲಿ ತಮ್ಮ ತೀರ್ಪಿಗೆ ನಾನು ಬದ್ಧನಾಗಿದ್ದೇನೆ. ಸದನದ ಎಲ್ಲಾ ಸದಸ್ಯರ ಸಹಕಾರದಿಂದ ಬಹುಶಃ ನಾವಿಂದು ಹೊಸ ಸಂಪ್ರದಾಯವನ್ನು ಹಾಕಲಿಕ್ಕೆ ಪ್ರಯತ್ನ ಮಾಡೋಣ ಎಂದು ನಿಮ್ಮಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೆ, ತಾವು ಕೊಟ್ಟಿರತಕ್ಕಂಥ ತೀರ್ಪಿಗೆ ನಾವೆಲ್ಲರೂ ಕೂಡ ತಲೆ ಬಾಗಿಸಬೇಕಾಗುತ್ತದೆ. ಅದರಲ್ಲಿ ಯಾರೂ ಕೂಡ ಹಿಂಜರಿಯುತ್ತಿಲ್ಲ. ಆದರೆ ಇವತ್ತು ವಸ್ತುಸ್ಥಿತಿ ಏನು ಇದೆ ಕೇವಲ ಇದು ಒಂದು ಲಾ ಅಂಡ್ ಆರ್ಡರ್ ಪ್ರಶ್ನೆಯಲ್ಲ. ಎಲ್ಲಿ ಜನ ಅಶಕ್ತರು ಇದ್ದಾರೋ, ಯಾವುದೋ ಒಂದು ನೆಪವನ್ನು ಒಡ್ಡಿ ಅಲ್ಲಿ ಅವರ ಮೇಲೆ ದೌರ್ಜನ್ಯವನ್ನು ನಡೆಸತಕ್ಕಂಥಾದ್ದು ಲಾ ಅಂಡ್ ಆರ್ಡರ್ ಏನಾಗುತ್ತದೆ ಪೊಲೀಸರೇ ಏನಾದರೂ ಮಾಡಿದ್ದರೆ ನಾವು ಹೇಳಬಹುದು. ಆದರೆ ಕೆಲವು ಮುಖಂಡರು ಮತ್ತು ಕೆಲವು ಪ್ರಮುಖರು ಮತ್ತು ಯಾವಯಾವ ಹಳ್ಳಿಗಳಲ್ಲಿ ಅವರ ಪ್ರಭಾವ ಇದೆ, ಆ ಪ್ರಭಾವವನ್ನು ಬೀರಿ ಅವರ ಶಕ್ತಿ, ಮಸಲ್ ಪವರ್ ಎಂದು ಏನು ಹೇಳುತ್ತೇವೆ. ಅದನ್ನು ಉಪಯೋಗ ಮಾಡಿ ಆ ಜನರನ್ನು ತುಳಿಯತಕ್ಕಂಥದ್ದು, ಲೂಟಿ ಮಾಡತಕ್ಕಂಥದ್ದು, ಅವರ ಮನೆಗಳಿಗೆ ನುಗ್ಗಿ ದೊಂಬಿ ಮಾಡತಕ್ಕಂಥಾದ್ದು. ಈ ಕೆಲಸವನ್ನು ಮಾಡುತ್ತಿದ್ದಾರೆ. ಲಾ ಅಂಡ್ ಆರ್ಡರ್ ನಾವು ಪೊಲೀಸರೆ ಹೋಗಿ ಹೊಡೆದಿದ್ದಾರೆ ಅವರನ್ನು ಹೆರಾಸ್‌ಮೆಂಟ್ ಮಾಡುತ್ತಿದ್ದಾರೆ ಎಂಬ ಒಂದೇ ಪ್ರಶ್ನೆ ಅಲ್ಲ. ಪ್ರಶ್ನೆ ಏನೆಂದರೆ, ಈ ಸರ್ಕಾರ ಬಂದಮೇಲೆ ಆ ಮುಖಂಡರುಗಳಿಗೆ ಏನಾದರೂ ಕುಮ್ಮಕ್ಕು ಬಂದಿದೆಯೋ, ಏಕೆ ಈ ರೀತಿಯಾಗಿ ಅನೇಕ ಬಡವರ ಓಣಿಗಳಲ್ಲಿ ಹೋಗಿ, ಅವರ ಸ್ಥಳಗಳಿಗೆ ಹೋಗಿ ಇವತ್ತಿನ ದಿವಸ ಅವರಿಗೆ ಹೊಡೆಯುತ್ತಿದ್ದಾರೆ, ಕೊಲೆ ಮಾಡುತ್ತಿದ್ದಾರೆ, ಲೂಟಿ ಮಾಡುತ್ತಿದ್ದಾರೆ. ಏನು ಕಾರಣ?

ಎನ್ನತಕ್ಕಂಥದನ್ನು ತಾವೂ ಕೂಡ ವಿಮರ್ಶೆ ಮಾಡಬೇಕಾಗುತ್ತದೆ. ತಾವೂ ಕೂಡ ಇದರ ಬಗ್ಗೆ ಹೇಳಬೇಕಾಗುತ್ತದೆ ಮತ್ತು ತಮ್ಮ ಮುಖಾಂತರ, ಈ ಸದನದ ಮುಖಾಂತರ ಒಂದು ಸಂದೇಶ ಮುಟ್ಟಬೇಕಾಗುತ್ತದೆ. ಯಾರೇ ಇದ್ದರೂ ಕೂಡ ತಮ್ಮ ಸರ್ಕಾರ ಬಡವರಿಗೆ ರಕ್ಷಣೆ ಕೊಡುತ್ತದೆ ಮತ್ತು ಮುಕ್ತವಾಗಿ ಪ್ರಜಾಪ್ರಭುತ್ವದಲ್ಲಿ ಅವರು ಮತದಾನ ಮಾಡುವುದಕ್ಕೆ ಅವರಿಗೆ ಹಕ್ಕು ಇದೆ. ನೀವು ಮಾಡಿದ್ದುದು ಸರಿ. ನಿಮ್ಮ ರಕ್ಷಣೆಗೆ ನಾವು ಇದ್ದೇವೆ. ನಾವು ಸಹಾಯ ಮಾಡುತ್ತೇವೆ. ನಿಮಗೆ ಪೋಲೀಸರಾಗಲಿ ಅಥವಾ ಮುಖಂಡರುಗಳಾಗಲೀ ಅಥವಾ ಆ ಭಾಗದಲ್ಲಿ ಇರತಕ್ಕಂಥ vested Interest Class ಏನು ಇದೆ ಇದು ಅಡ್ವಾಂಟೇಜ್ ಏನು ತೆಗೆದುಕೊಳ್ಳುತ್ತಿದ್ದಾರೆ, ಅದಕ್ಕೆ ಆಸ್ಪದ ಇಲ್ಲ ಎನ್ನತಕ್ಕಂಥ ಒಂದು ಸಂದೇಶ ಇಲ್ಲಿಂದ ಹೋದರೆ ಪ್ರತಿ ಹಳ್ಳಿಗಳಲ್ಲಿ ಶಾಂತಿ ಇರುತ್ತದೆ. ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಶಾಂತಿ ಇರುತ್ತದೆ. ಇಲ್ಲ ಎಂದರೆ ನಾವು ಏನು ಮಾಡಿಲ್ಲ ಎಂದು ನಾನು ಹೇಳುತ್ತಿಲ್ಲ. ನೀವು ನಾಳೆ ನಿಮ್ಮ ಸರ್ಕಾರದಲ್ಲಿ ಏನು ಇತ್ತು. ಅದು ಹೇಗೆ ಆಯಿತು ? ಇವೆಲ್ಲವನ್ನೂ ಹೇಳುವುದು ಇರುತ್ತದೆ.

ನನಗೂ ಕೇಳಿ ಕೇಳಿ ಸಾಕಾಗಿದೆ. ನಾನು ಸುಮಾರು 24–25 ವರ್ಷಗಳಿಂದ ಈ ಸದನದಲ್ಲಿ ಇದ್ದೇನೆ. ಆದರೆ ಇದನ್ನೇ ನೆಪ ಮಾಡಿಕೊಂಡು, ನೀವು ಹೀಗೆ ಮಾಡಿದಿರಿ; ಅದಕ್ಕೇ ನಾವು ಹೀಗೆ ಮಾಡುತ್ತೇವೆ. ಇವೆಲ್ಲಾ ಬೇಡ. ಆದರೆ ಕೆಲವು ಸಲ ಏನಾಗುತ್ತದೆ ಎಂದರೆ, ನನ್ನ ಮತಕ್ಷೇತ್ರದಲ್ಲಿ ನಾನು ಬಹಳ ಸ್ಟ್ರಾಂಗ್ ಅಥವಾ ಪವರ್‌ಫುಲ್ ಇದ್ದರೆ ಅಲ್ಲಿ ನನ್ನ ಬೆಂಬಲಿಗರು ಶೋಷಣೆ ಮಾಡತಕ್ಕವರು ಇದ್ದರೆ ಅಥವಾ ಆ ದಾರಿಯಲ್ಲಿ ನಡೆಯತಕ್ಕವರು ಇದ್ದರೆ. ಅವರಿಗೆ ನಾವು ಬೆಂಬಲ ಕೊಟ್ಟರೆ ಅವರಿಗೆ ಇನ್ನೂ ಹೆಚ್ಚಿನ ಶಕ್ತಿ ಬರುತ್ತದೆ. ಅವರು ಹಳ್ಳಿಗಳಲ್ಲಿ ತಮ್ಮ ಮನಸ್ಸಿಗೆ ಬಂದಂತೆ ಕೆಲವರ ಶೋಷಣೆ ಮಾಡುತ್ತಾರೆ. ಅದಕ್ಕೆ ಕಡಿವಾಣ ಹಾಕಬೇಕು. ಅದನ್ನು ನಿಲ್ಲಿಸಬೇಕು. ಅದನ್ನು ತಡೆಹಿಡಿಯಬೇಕು ಎಂದರೆ ಈ ಸದನದಿಂದ ತಮ್ಮ ಮುಖಾಂತರ ಒಂದು ಸಂದೇಶ ಹೋಗಬೇಕಾಗುತ್ತದೆ. ಇಂತಹ ಯಾವುದೇ ಅನ್ಯಾಯಗಳು, ದಬ್ಬಾಳಿಕೆಗಳು, ಅತ್ಯಾಚಾರಗಳು ನಡೆಯುವುದನ್ನು ನಾವು ಮತ್ತು ನಮ್ಮ ಸರ್ಕಾರ ಸಹಿಸುವುದಿಲ್ಲ ಎನ್ನತಕ್ಕದ್ದನ್ನು ಹೇಳಿ ಅದರಂತೆ ತಾವು ನಡೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಈಗಾಗಲೇ ನಾನು ಮೂರು ಉದಾಹರಣೆಗಳನ್ನು ಕೊಟ್ಟಿದ್ದೇನೆ. ತಮ್ಮ ಮತಕ್ಷೇತ್ರದಲ್ಲೇ ಗಲಾಟೆಯಾಗಿದೆ. ಕೆಲವು ಜನ ಹೋಗಿದ್ದಾರೆ. ಅವರು ಯಾರು ? ಏಕೆ ಹಾಗೆ ಮಾಡಿದರು ? ಏಕೆ ಮನೆಗೆ ನುಗ್ಗಿದರು ? ಏಕೆ ಬಂಗಾರ ದೋಚಿದ್ದಾರೆ ? ಏಕೆ ಹೊಡೆದಾಡಿದರು ? ಅದೇ ರೀತಿಯಲ್ಲಿ ಅಂತಹವರೇ ಈಗ ಗಂಡಸಿಯಲ್ಲಿಯೂ ಕೂಡ ಹೋಗಿದ್ದಾರೆ. ಬೇಲೂರಿನಲ್ಲಿ ಹೋಗಿದ್ದಾರೆ. ಗೋಕಾಕ್‌ನಲ್ಲಿ ಗಲಾಟೆ ಆಗಿದೆ. ಕೋಲಾರದಲ್ಲಿ ಆಗಿದೆ. ಮಧುಗಿರಿಯಲ್ಲಿ ಆಗಿದೆ. ಹೀಗೆ ಅನೇಕ ಕಡೆ, ಈ ರೀತಿ ಆಗಿದೆ. ಅದಕ್ಕೆ ಕಾರಣಗಳು ಏನು ಎಂಬುದನ್ನೂ ಕೂಡ ಕೇಳಬಾರದು. ಅದೂ ಲಾ ಅಂಡ್ ಆರ್ಡರ್ ಪ್ರಶ್ನೆ ಎಂದರೆ ಹೇಗೆ ? ಅದು ಯಾವ ಲಾ ಅಂಡ್ ಆರ್ಡರ್ ಅಧ್ಯಕ್ಷರೇ ? ಆದುದರಿಂದ ಇದನ್ನು ಸವಿಸ್ತಾರವಾಗಿ ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕು. ನಾವು ಅನೇಕ ಮಾನ್ಯ ಸದಸ್ಯರು. ಕಾಂಗ್ರೆಸ್ಸಿನವರು ಇರಬಹುದು; ಬಿ.ಜೆ.ಪಿ ನವರು ಇರಬಹುದು ಹಾಗೂ ಕೆಲವು ಕಡೆ ಎಲ್ಲಿ ಜನತಾದಳದ ಅಶಕ್ತ ಸದಸ್ಯರು ಇದ್ದಾರೆ, ಅಲ್ಲಿ ಕೂಡ ಗಲಾಟೆ ಆಗಿರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ. ಕೆಲವು ಕಡೆ ಕಾಂಗ್ರೆಸ್ಸಿನವರು ಪವರ್‌ಫುಲ್ ಇರುವ ಮತಕ್ಷೇತ್ರದಲ್ಲಿ ಅಲ್ಲಿ ಯಾರು ವೀಕ್ ಇರುತ್ತಾರೆ ಅವರ ಮೇಲೆ ಆಗಿರಬಹುದು. ಬಿ.ಜೆ.ಪಿ ಪವರ್‌ಫುಲ್ ಇರುವ ಕಡೆ ಕಾಂಗ್ರೆಸ್ಸಿಗರ ಮೇಲೆ ದಾಳಿ ಆಗಿರಬಹುದು. ಹೀಗೆ ಇದು ಪಕ್ಷಾತೀತವಾದಂತಹ ವಿಚಾರ. ಏಕೆಂದರೆ ಪ್ರತಿಯೊಬ್ಬರಿಗೂ ಶಕ್ತಿ ಬರುತ್ತದೆ. ಆದುದರಿಂದ ತಾವು ದಯವಿಟ್ಟು ಕೂಲಂಕಷವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನೂ ಅನೇಕ

ಮಾನ್ಯ ಸದಸ್ಯರು ಈ ವಿಚಾರದಲ್ಲಿ ಬೆಳಕು ಚೆಲ್ಲುತ್ತಾರೆ. ಅಮೇಲೆ ಬೇಕಾದರೆ ಇದಕ್ಕೆ ಅವರು ಏನು ಉತ್ತರ ಬೇಕಾದರೂ ಹೇಳಲಿ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):- ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆಗೆ ತಾವು ಅನುಮತಿ ಕೊಡಬೇಕೆನ್ನುವ ಪ್ರಯತ್ನದಲ್ಲಿ ಇವತ್ತು ನಾನು ಮಾತನಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡುತ್ತಾ ಸಾಂದರ್ಭಿಕವಾಗಿ ಒಂದು ಮಾತನ್ನು ಹೇಳಿದರು. ಇದು ಕೇವಲ ಕಾನೂನು ಮತ್ತು ವ್ಯವಸ್ಥೆ ಪ್ರಶ್ನೆ. ಇವುಗಳನ್ನು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗತಕ್ಕಂತಹ ಕಾಲದಲ್ಲಿ ಪ್ರಸ್ತಾಪ ಮಾಡುವುದಕ್ಕೆ ವಿಪುಲವಾದ ಅವಕಾಶಗಳಿವೆ. ಅದನ್ನು ಉಪಯೋಗಿಸಿಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಸದನದ ಸಭಾನಾಯಕರಿಂದಲೇ ಇಂತಹಮಾತು ಬಂದಾಗ ನಾವು ನಿಖರವಾಗಿ ಹೇಳಬೇಕಾಗುತ್ತದೆ. ಏಕೆಂದರೆ ನಮ್ಮ ನಾಯಕರು ಈಗಾಗಲೇ ಪ್ರಸ್ತಾಪ ಮಾಡುತ್ತಾ ಹೇಳಿದ್ದಾರೆ. ಕೇವಲ ಕಾನೂನು ಮತ್ತು ವ್ಯವಸ್ಥೆ ಅಷ್ಟೇ ಪ್ರಸ್ತಾಪ ಮಾಡಿಲ್ಲ. ಕೆಲವು ಕಡೆ ಘಟನೆಗಳು ನಡೆದು ಹೋಗಿವೆ. ಹಾಗೆ ನಡೆದಂತಹ ಘಟನೆಗಳು ಕೂಡ ಕಾನೂನು ಪ್ರಕಾರ ಶಿಕ್ಷಾರ್ಹವಾದ ಘಟನೆಗಳಾಗಿವೆ. ಆದುದರಿಂದ ಕೇವಲ ಲಾ ಅಂಡ್ ಆರ್ಡರ್ ಪ್ರಶ್ನೆ ಅಷ್ಟೇ ಆಗಿದ್ದರೆ ಅದನ್ನು ನಾವು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡತಕ್ಕಂತಹ ಕಾಲದಲ್ಲಿ ಪ್ರಸ್ತಾಪ ಮಾಡಬಹುದಾಗಿತ್ತು. ಆದರೆ ಇಂತಹ ವಿಶಿಷ್ಟವಾದ, ವಿಶೇಷವಾಗಿ ನಡೆದಂತಹ ಕೆಲವು ಘಟನೆಗಳನ್ನು ನಾವು ಪ್ರಸ್ತಾಪ ಮಾಡದೇ ಹೋದರೆ, ಚರ್ಚೆ ಮಾಡದೇ ಹೋದರೆ ಆ ಘಟನೆಗಳ ಮೇಲೆ ಬೆಳಕು ಚೆಲ್ಲುವುದಕ್ಕಾಗುವುದಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ರೀತಿಯಲ್ಲಿ ಈ ಸದನದಿಂದ ರಾಜ್ಯದ ಜನರಿಗೆ ಒಂದು ಮೆಸೇಜ್, ಒಂದು ಆದೇಶ ಹೋಗಬೇಕು. ನಾವು ಚರ್ಚೆ ಮಾಡದೇ ಹೋದರೆ ಅಂತಹ ಸಂದೇಶ ಹೋಗುವುದಕ್ಕಾಗುವುದಿಲ್ಲ. ಆದುದರಿಂದ ಇವತ್ತು ಈ ನಿಲುವಳಿ ಸೂಚನೆಯನ್ನು ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕೆಂದು ಒತ್ತಾಯಿಸುತ್ತೇನೆ. ಕಾರಣವೇನೆಂದರೆ ಇದಕ್ಕೆ ಪ್ರಾಸ್ತಾವಿಕವಾಗಿ ಕೆಲವು ಘಟನೆಗಳು ರಾಜ್ಯದಲ್ಲಿ ನಡೆದಿವೆ. ಅದರಲ್ಲಿಯೂ ಕೂಡ ಈ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಇಂತಹ ಘಟನೆಗಳು ನಡೆದಿದೆ. ಆ ಘಟನೆಗಳು ನಡೆದ ನಂತರ ಮೊದಲನೆಯ ಬಾರಿಗೆ ನಾವು ಈ ಸದನದಲ್ಲಿ ಸೇರುತ್ತಿದ್ದೇವೆ. ನಿಯಮ 60ರ ಪ್ರಕಾರ ಇತ್ತೀಚೆಗೆ ನಡೆದಂತಹ ಈ ಘಟನೆಗಳ ಮೇಲೆ ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ.

ಇವೆಲ್ಲವೂ ಕೂಡ ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಂತ ಪ್ರಮುಖವಾದ ಘಟನೆಗಳು. ನಿಯಮಾವಳಿ 60ರ ಪ್ರಕಾರ ನಾವು 2 ಪ್ರಮುಖ ಅಂಶಗಳನ್ನು ನಾವು ಇಲ್ಲಿ ಸಮರ್ಥನೆ ಮಾಡಬೇಕಾಗುತ್ತದೆ. ಅಂದರೆ ಇತ್ತೀಚೆಗೆ ನಡೆದಂಥ ಘಟನೆಗಳು ಮತ್ತು ಸಾರ್ವಜನಿಕವಾದ ಅತ್ಯಂತ ಪ್ರಮುಖವಾದ ಘಟನೆಗಳು ಎರಡು. ಇವೆರಡೂ ಅಂಶಗಳನ್ನು ಇದು ಸ್ಯಾಟಿಸ್‌ಫೈ ಮಾಡುತ್ತದೆ. ತಮಗೆ ಹೇಳುವುದಾದರೆ ಇವತ್ತು ಗೋಕಾಕ್‌ನಲ್ಲಿ ನಡೆದಿರತಕ್ಕ ಘಟನೆ ಏನಿದೆ ಇದು ಸಾಮಾನ್ಯ ಘಟನೆ ಏನೂ ಅಲ್ಲ. ಅಲ್ಲಿ ಸಾರ್ವಜನಿಕವಾಗಿ ದೊಂಬಿ, ಲೂಟಿಗಳು ನಡೆದಿವೆ. ಆದರೆ ಈ ಹಂತದಲ್ಲಿ ನಾನು ಇದರ ಬಗ್ಗೆ ವಿವರಕ್ಕೆ ಹೋಗುವುದಿಲ್ಲ. ಇದು ಪ್ರೈಮಾಫೇಸಿ ಕೇಸು. ಇದರಲ್ಲಿ ಏತಕ್ಕೆ ಲೂಟಿಯಾಯಿತು. ಹೇಗೆ ಆಯಿತು. ಯಾರ್‍ಯಾರು ಮಾಡಿದರು ಎಂಬುದಕ್ಕೆ ಈ ಹಂತದಲ್ಲಿ ನಾವು ಹೋಗುವುದಿಲ್ಲ. ತಾವು ನಮಗೆ ಚರ್ಚೆಗೆ ಅನುಮತಿಯನ್ನು ಕೊಟ್ಟಾಗ ಆ ಚರ್ಚೆಯ ಸಂದರ್ಭದಲ್ಲಿ ಎಲ್ಲಾ ವಿವರಗಳನ್ನೂ ಸದನದ ಮುಂದಿಡುತ್ತೇವೆ. ಇನ್ನಷ್ಟು ಬೆಳಕನ್ನು ನಾವು ಚೆಲ್ಲಿದಾಗ ತಾವು ತೀರ್ಪನ್ನು ಕೊಡಲು ಅನುಕೂಲವಾಗುತ್ತದೆ. ಆದರೆ ಗೋಕಾಕ್‌ನಲ್ಲಿ ಇತ್ತೀಚೆಗೆ ಏನು ಘಟನೆ ನಡೆದಿದೆ ಎಂದರೆ, ಇದಕ್ಕೆ ಏನಾದರೂ ಒಂದು ಪ್ರೇರೇಪಣೆ ಇರಬೇಕು. ಅದು ಬಹುಶಃ ರಾಜಕೀಯ ಪ್ರೇರೇಪಣೆ ಇರಬಹುದು ಅಥವಾ ಸಮಾಜಘಾತುಕ ಶಕ್ತಿಗಳು ಅಂಥ ಸರ್ಕಾರದ ಅಸ್ತಿತ್ವದ ಹಿಂದೆ ಉತ್ತೇಜನ

ಪಡೆದಿರಬಹುದು. ಅವಕ್ಕೆ ಹೊಸಶಕ್ತಿ ಬಂದಿರಬಹುದು. ವಿಶ್ವಾಸ ಹುಟ್ಟಿರಬಹುದು. ಹಿಂದೆ ಇದ್ದಂಥ ಸಮಾಜಘಾತುಕ ಶಕ್ತಿಗಳು ಏನು ಸತ್ತು ಹೋಗಿದ್ದುವು ಅಥವಾ ತಲೆಯನ್ನು ತಗ್ಗಿಸಿದ್ದುವು, ಇಂಥ ಹೊಸ ರಾಜಕೀಯ ವಾತಾವರಣದಿಂದ ಮತ್ತೆ ಅವು ತಮ್ಮ ತಲೆ ಎತ್ತಲು ಅವಕಾಶವನ್ನು ಕಲ್ಪಿಸಿರಬಹುದು. ಆದರೆ ಆ ವಾತಾವರಣವನ್ನು ಯಾರು ಕಲ್ಪಿಸಿದರೆಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ತಾನೇತಾನಾಗಿ ಅಂಥ ಪರಿಸ್ಥಿತಿ ಉದ್ಭವವಾಗಿರಬಹುದು. ಆದರೂ ಇವತ್ತು ಗೋಕಾಕ್‌ದಲ್ಲಿ ನಡೆದಿರುವಂಥ ಘಟನೆಯನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದಾಗ ಇದೊಂದು ಸಾರ್ವಜನಿಕವಾದ ಪ್ರಮುಖ ವಿಚಾರವಾಗಿದೆ. ಈ ವಿಚಾರವನ್ನು ಇಲ್ಲಿ ನಾವು ನಿಲುವಳಿ ಸೂಚನೆಯ ಮುಖಾಂತರ ಚರ್ಚೆ ಮಾಡಿದರೆ ಸರ್ಕಾರ ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಖಂಡಿತವಾಗಿ ಸಹಾಯಕವಾಗುತ್ತದೆ. ಜೊತೆಗೆ ಸಾರ್ವಜನಿಕರಲ್ಲಿ ಉಂಟಾಗಿರತಕ್ಕ ಭಯ, ನೀತಿ ನಿವಾರಣೆಯಾಗುತ್ತದೆ. ಈ ದೃಷ್ಟಿಯಿಂದ ಈ ನಿಲುವಳಿ ಸೂಚನೆಗೆ ತಾವು ಅನುಮತಿಯನ್ನು ಕೊಡಬೇಕು.

ಇನ್ನು ಎರಡನೆಯದಾಗಿ ಹೇಳುವುದಾದರೆ, ಇತ್ತೀಚೆಗೆ ಮಧುಗಿರಿಯಲ್ಲಿ ಒಂದು ಕೊಲೆ ನಡೆದಿದೆ. ಅಲ್ಲಿ ಸಮಾಜದ ದುರ್ಬಲದ ಕೊಲೆ ನಡೆದಿದೆ. ಅಲ್ಲಿ ಲೂಟಿಯಾಗಿದೆ, ಅಲ್ಲಿಯ ವಾತಾವರಣ ಹದಗೆಟ್ಟಿದೆ, ಸಾರ್ವಜನಿಕರಿಗೆ ಭಯ ಉಂಟಾಗಿದೆ. ಅದೂ ಅಲ್ಲದೆ ಅದು ಒಂದು ಮೀಸಲು ಕ್ಷೇತ್ರ ಕೂಡ ಹೌದು. ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಈ ಘಟನೆ ನಡೆದಿದೆ. ಆದರೆ ಈ ಸರ್ಕಾರದಿಂದ ಈ ಘಟನೆ ನಡೆದಿದೆ ಎಂದು ನಾನು ಹೇಳುವುದಿಲ್ಲ. ಈ ಸರ್ಕಾರ ಅಸ್ತಿತ್ವಕ್ಕೆ ಬಂದನಂತರ ಉಂಟಾದ ಮಧುಗಿರಿಯ ಘಟನೆ ಇವತ್ತು ಚರ್ಚೆಗೆ ಅರ್ಹತೆಯನ್ನು ಪಡೆದಿದೆ. ಮಧುಗಿರಿ ಕ್ಷೇತ್ರದಲ್ಲಿ ನಡೆದಿರತಕ್ಕಂಥಾದ್ದು ಕೇವಲ ಇದೊಂದು ಸಣ್ಣ ಘಟನೆ ಅಲ್ಲ, ಅಲ್ಲಿ ಕೊಲೆ ನಡೆದಿದೆ. ಸಾಮಾಜಿಕ ದುರ್ಬಲರ ಮೇಲೆ ದೌರ್ಜನ್ಯ ನಡೆದಿದೆ. ಅಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಇವತ್ತು ಇದಕ್ಕೆ ನಾವು ಒಂದು ಪರಿಹಾರವನ್ನು ಕಂಡು ಹಿಡಿಯಬೇಕಾದರೆ, ಇಲ್ಲಿ ವಿವರವಾದ ಚರ್ಚೆ ಆಗಬೇಕು. ಆಗ ಯಾರು ಇದಕ್ಕೆ ಕಾರಣೀಭೂತರಾಗಿದ್ದಾರೆ, ಇದರ ಹಿಂದೆ ಯಾರಿದ್ದಾರೆ, ಇದಕ್ಕೆ ಯಾರ ಬೆಂಬಲವಿದೆ, ಇದು ನಡೆಯುವುದಕ್ಕೆ ಕಾರಣವೇನೆಂಬ ಬಗ್ಗೆ ಬೆಳಕು ಚೆಲ್ಲಬೇಕಾಗಿದೆ.

ಇದೇರೀತಿ ಮಾನ್ಯ ಮುಖ್ಯಮಂತ್ರಿಗಳು ಆರಿಸಿ ಬಂದಿರತಕ್ಕ ಕ್ಷೇತ್ರವಾದ ರಾಮನಗರದ ಬಗ್ಗೆ ಕೂಡ ಹೇಳಬೇಕಾಗಿದೆ. ಅಲ್ಲಿ ಒಂದು ಘಟನೆ ನಡೆದಿದ್ದು ಕೇಸು ರಿಜಿಸ್ಟರ್ ಆಗಿದ್ದರೂ ಕೂಡ ಇವತ್ತಿನವರೆಗೂ ಅಲ್ಲಿ ಯಾರ ದಸ್ತಗಿರಿಯೂ ಆಗಿಲ್ಲವೆಂದರೆ ಹೇಗೆ? ದಸ್ತಗಿರಿ ಆಗುವವರೆಗೂ ಮಾಲನ್ನು ವಶಪಡಿಸಿಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಹೊಣೆಗಾರರೆಂದು ನಾನು ಇವತ್ತು ಹೇಳುವುದಕ್ಕೆ ಹೋಗುವುದಿಲ್ಲ. ವಿವರವಾದ ಚರ್ಚೆಗೆ ಅವಕಾಶ ಸಿಕ್ಕಿದಾಗ ಮತ್ತು ಇದಕ್ಕೆ ಯಾರು ಕಾರಣೀಭೂತರೆಂದು ಹೇಳುವುದಕ್ಕೆ ಅನುಕೂಲವಾಗುತ್ತದೆ. ಈ ಹೊಸ ಸರ್ಕಾರದ ಅಸ್ತಿತ್ವದಿಂದ ಅಲ್ಲಿ ಹಿಂದಿನ ಯಾವುದಾದರೂ ಸಮಾಜಘಾತುಕ ಶಕ್ತಿಗಳು ಪ್ರೇರೇಪಣೆಯನ್ನು ಪಡೆದಿದ್ದರೆ ಅದನ್ನು ಹತ್ತಿಕ್ಕಬೇಕಾಗುತ್ತದೆ. ಸಮಾಜದಲ್ಲಿ ನೆಮ್ಮದಿಯನ್ನು ಮೂಡಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಈ ವಿಚಾರ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದೆ. ಇದೇ ರೀತಿ ಕೋಲಾರದಲ್ಲಿ ನಡೆದಂಥ ಘಟನೆ ಕೂಡ. ಇದೇರೀತಿ ರಾಜ್ಯದ ಅನೇಕ ಭಾಗಗಳಲ್ಲಿ ಏನೇನು ಘಟನೆಗಳು ನಡೆದಿದೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದನಂತರ ಆದರಲ್ಲೂ ಈ ಸದನ ಸೇರುವುದಕ್ಕೆ ಮುಂಚಿತವಾಗಿ ನಡೆದಿರುವಂಥ ಎಲ್ಲಾ ಘಟನೆಗಳನ್ನೂ ನಾವು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಸರ್ವೇಸಾಧಾರಣವಾಗಿ ಯಾರಾದರೂ ಊಹಿಸಬಹುದು. ಇವತ್ತು ರಾಜ್ಯದಲ್ಲಿ ಆದಂಥ ರಾಜಕೀಯ ಬದಲಾವಣೆಯಿಂದ ಸಾಮಾಜಿಕವಾಗಿ ದುರ್ಬಲರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ ಎಂದು ಈ ಭಾವನೆ ಏನು ಬಂದಿದೆ, ಇದನ್ನು ನಾವು ಹೋಗಲಾಡಿಸಬೇಕಾಗಿದೆ. ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುತಕ್ಕ

ನಾವು, ಇದರ ಬಗ್ಗೆ ಪ್ರತಿಪಾದನೆಯನ್ನು ಮಾಡತಕ್ಕ ನಾವು, ಇವತ್ತು ಸಮಾಜದಲ್ಲಿ ಉಂಟಾಗಿರತಕ್ಕ ಭಯ–ಭೀತಿಯನ್ನು ನಿವಾರಣೆ ಮಾಡತಕ್ಕ ಪ್ರಯತ್ನವನ್ನು ನಾವು ಈ ಸದನದ ಮುಖಾಂತರ ಮಾಡಬೇಕಾಗಿದೆ. ಆದ್ದರಿಂದ ನಾನಾದರೂ ಹೇಳುತ್ತೇನೆ. ನಾವು ಏನು ಈ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಇದು ಚರ್ಚೆಗೆ ಯೋಗ್ಯವಾಗಿದೆ. ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿಶೇಷವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ ಅವರು ವಿರೋಧಪಕ್ಷದಲ್ಲಿ ಕುಳಿತು ಕೆಲಸಮಾಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ನಾವೂ ಕೂಡ ವಿರೋಧಪಕ್ಷದಲ್ಲಿ ಕುಳಿತು ಕೆಲಸಮಾಡಿದ್ದೇವೆ. ಇಂಥ ನಿಲುವಳಿ ಸೂಚನೆಗಳನ್ನು ಅವರು ಅನೇಕಸಾರಿ ಈ ಸದನದಲ್ಲಿ ಮಂಡಿಸಿದ್ದಾರೆ ಹಾಗೂ ಚರ್ಚೆಯನ್ನೂ ಕೂಡ ಮಾಡಿದ್ದಾರೆ. ನಾವು ಪೂರ್ವಭಾವಿಯಾಗಿ ಚರ್ಚೆ ಮಾಡಿ ತಮ್ಮ ಮನಸ್ಸನ್ನು ಗೆದ್ದು ಅನುಮತಿಯನ್ನು ಪಡೆದುಕೊಳ್ಳುವುದಕ್ಕಿಂತ ಮುಂಚೆ ಮಾನ್ಯ ಮುಖ್ಯ ಮಂತ್ರಿಗಳೇ ಎದ್ದು ಈ ನಿಲುವಳಿ ಸೂಚನೆಗೆ ನಾವು ಅವಕಾಶವನ್ನು ಮಾಡಿಕೊಡುತ್ತೇವೆ ಎನ್ನುವ ಮಾತು ಅವರಿಂದ ಬರುತ್ತದೆಂದು ನಾವು ನಿರೀಕ್ಷಣೆ ಮಾಡಿದ್ದೆವು. ಆದರೆ ಇದು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ವಿವರವಾದ ಚರ್ಚೆಯನ್ನು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಮಾಡಬಹುದೆಂದು ಇವರು ಹೇಳಿರುವುದನ್ನು ನೋಡಿದರೆ ನನಗೆ ಒಂದು ರೀತಿಯ ಅಂಜಿಕೆ ಶುರುವಾಗಿದೆ.

ಅಧ್ಯಕ್ಷರು:– ಏನೂ ಇಲ್ಲ, 1972ರ ತಿಮ್ಮಪ್ಪನವರಾಗುವುದಕ್ಕೆ ನಿಮಗೆ ಇನ್ನೂ ಸ್ವಲ್ಪ ಸಮಯಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:– ಇವತ್ತಿನ ಮಾನ್ಯ ಸಭಾ ನಾಯಕರು ಆಡಿದ ಮಾತಿನ ದಾಟಿಯನ್ನು ನೋಡಿದರೆ ನನಗೆ ಅಂಜಿಕೆಯಾಗಿದೆ. ಇಂಥ ಮಾತುಗಳಿಂದ ನಮಗಿರತಕ್ಕ ಹಕ್ಕುಬಾಧ್ಯತೆಗಳನ್ನು ಕಿತ್ತುಕೊಳ್ಳುವ ಪ್ರಯತ್ನ ನಡೆದರೆ ನಾವು ಬೇರೆ ರೀತಿಯಲ್ಲಿ ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಭಾನಾಯಕರಲ್ಲಿ ಕೇಳಿಕೊಳ್ಳುತ್ತೇನೆ. ಈ ನಿಲುವಳಿ ಸೂಚನೆಗೆ ತಾವು ಅನುಮತಿಯನ್ನು ನೀಡಬೇಕು. ಇದು ಎಲ್ಲಾ ರೀತಿಯಿಂದಲೂ ಚರ್ಚೆಗೆ ಅರ್ಹತೆಯನ್ನು ಪಡೆದಿದೆ. ಯಾವುದೋ ಕಾರಣವನ್ನು ತೋರಿಸಿ ಮಾನ್ಯ ಮುಖ್ಯ ಮಂತ್ರಿಗಳಿಂದ ನುಣುಚಿಕೊಳ್ಳುವ ಪ್ರಯತ್ನ ಆಗಬಾರದೆಂದು ಕೇಳಿಕೊಂಡು ಇದಕ್ಕೆ ತಾವು ಅನುಮತಿಯನ್ನು ನೀಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:– ಖರ್ಗೆಯವರೆ, ತಾವು 10 ಜನ ಸಹಿ ಮಾಡಿ ಈ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೀರಿ. ಆದರೆ ನಿಯಮಾನುಸಾರ ಹೇಳುವುದಾದರೆ 3 ಜನರಿಗಿಂತ ಹೆಚ್ಚಿಗೆ ಸಹಿ ಹಾಕಿ ಕಳುಹಿಸುವಂತಿಲ್ಲ ಎಂದು ಇದೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ನಡೆದಿರತಕ್ಕ ಹಲವಾರು ಕಾರ್ಯಕಲಾಪಗಳನ್ನು ನಾನು ನೋಡಿದ್ದೇನೆ. ನೋಟೀಸ್‌ಗೆ ಸಹಿ ಹಾಕಿದವರೇ ಮಾತನಾಡಬೇಕೆಂದು ಏನೂ ಇಲ್ಲ. ವಿಷಯದ ಪ್ರಾಮುಖ್ಯತೆ ಬಂದಾಗ ಬೇರೆಯವರೂ ಕೂಡ ಮಾತನಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ತಾವು ಅವಕಾಶವನ್ನು ಕೊಡುವುದಾದರೆ ಕೊಡಿ. ನಮಗೂ ಒಂದೊಂದು ನಿಮಿಷ ಮಾತನಾಡಲು ಅವಕಾಶ ಕೊಟ್ಟರೆ ಒಳ್ಳೆಯದೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು:– ಸಹಿ ಹಾಕಿರುವವರನ್ನು ಹೊರತುಪಡಿಸಿ ಬೇರೆಯವರು ಮಾತನಾಡುವುದಕ್ಕೆ ನಿಯಮಾವಳಿಯ ಪ್ರಕಾರ ಅವಕಾಶವಿಲ್ಲ. ತಾವು ಸಾಮಾನ್ಯವಾಗಿ ಎಲ್ಲಾ ವಿಷಯಗಳ ಮೇಲೂ ಮಾತನಾಡುತ್ತಿರುತ್ತೀರಿ. ಆದ್ದರಿಂದ ಹಾಗೆ ತಾವು ತಿಳಿದುಕೊಂಡಿದ್ದೀರಿ ಅಷ್ಟೆ. ಆದರೆ ನಿಯಮಾವಳಿಯ ಪ್ರಕಾರ ಆ ರೀತಿಯ ಅವಕಾಶವಿಲ್ಲ. ನೀವು ಮಾತನಾಡಬೇಕಾದರೆ ಬೇರೆ ಅವಕಾಶವನ್ನು ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಈ ನಿಲುವಳಿ ಸೂಚನೆಯ ಬಗ್ಗೆ ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ತಮ್ಮ ತೀರ್ಪಿನ ವಿರುದ್ಧವಾಗಿ ನಾನು ಹೋಗುತ್ತಿಲ್ಲ. ಆದರೆ ಈ ನಿಲುವಳಿ ಸೂಚನೆಯ ಬಗ್ಗೆ ಎಲ್ಲರೂ ಕೂಡ ಭಾಗವಹಿಸುವ ಸಂಪ್ರದಾಯ ನಡೆದುಕೊಂಡು ಬಂದಿದೆ. ತಾವು ಆ ಸಂಪ್ರದಾಯವನ್ನು ಮುಟ್ಟುಗೋಲುಮಾಡಿ ಬೇರೆ ರೀತಿಯಲ್ಲಿ ತೆಗೆದುಕೊಂಡು ಹೋಗುವುದಾದರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ.

ಅಧ್ಯಕ್ಷರು:- ಒಳ್ಳೆಯ ಸಂಪ್ರದಾಯವನ್ನೇ ಹಾಕೋಣ.

† ಶ್ರೀ ಬಿ. ಶಿವರಾಮು (ಗಂಡಸಿ):- ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಈ ರಾಜ್ಯದಲ್ಲಿ ಬಹಳಷ್ಟು ಕಡೆ ಗೊಂದಲ, ಕೆಲವು ಕಾರ್ಯಕರ್ತರ ಮೇಲೆ ದೌರ್ಜನ್ಯ, ಹಿಂಸಾಕೃತ್ಯ, ಕೊಲೆಗಳು ನಡೆದಿರುವ ಬಗ್ಗೆ ನಮ್ಮ ಅನೇಕ ಮಾನ್ಯ ಹಿರಿಯ ಸದಸ್ಯರು ಈ ಸದನದ ಗಮನವನ್ನು ಸೆಳೆಯುವುದರ ಮೂಲಕ ಈ ನಿಲುವಳಿ ಸೂಚನೆಗೆ ಪುಷ್ಟಿ ಕೊಡುವ ಪ್ರಯತ್ನ ಮಾಡಿದ್ದಾರೆ. ನಾನು ಸೂಕ್ಷ್ಮವಾಗಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇವಲ ಎರಡು ವಿಚಾರಗಳನ್ನು ಹೇಳುವುದಾದರೆ, ಈ ನಿಲುವಳಿ ಸೂಚನೆಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂಬ ಮನವಿಯನ್ನು ಮಾನ್ಯ ಅಧ್ಯಕ್ಷರಲ್ಲಿ ನಾನು ಮಾಡಿಕೊಳ್ಳುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೆ, ಇದು ಪಕ್ಷಾತೀತವಾದ ವಿಚಾರವೆಂಬುದನ್ನು ಈಗಾಗಲೇ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆ. ತಮಗೆ ಗೊತ್ತಿರುವಂತೆ 14 ಮತ್ತು 15ನೇ ತಾರೀಖಿನ ಪತ್ರಿಕೆಗಳಲ್ಲಿ ಈಗಾಗಲೇ ಮಾನ್ಯ ಪತ್ರಕರ್ತರು ಯಾವುದೇ ಅಧಿಕಾರಿಗಳ ಸಹಾಯವಿಲ್ಲದೆ, ಯಾವುದೇ ಪಕ್ಷದ ಕಾರ್ಯಕರ್ತರ ಸಹಾಯವಿಲ್ಲದೆ, ಹಳ್ಳಿಗಳಿಗೆ ಭೇಟಿ ನೀಡಿ ಆ ಗ್ರಾಮಗಳಲ್ಲಿ ನಡೆದಂಥ ಗಲಾಟೆ ಬಗ್ಗೆ, ಗೊಂದಲದ ಬಗ್ಗೆ ಹಿಂಸಾಚಾರದ ಬಗ್ಗೆ, ದೌರ್ಜನ್ಯದ ಬಗ್ಗೆ ಏನು ನಡೆಯಿತೆಂಬುದನ್ನು ಬಹಳ ವಿಸ್ತಾರವಾಗಿ ಪ್ರಕಟಮಾಡಿದ್ದಾರೆ. ಈ ವಿಚಾರ ಸ್ಥಳೀಯ ಪತ್ರಿಕೆಗಳಲ್ಲಿ ಬಂದಿದೆ. ಬೇರೆ ಡೆಕ್ಕನ್ ಹೆರಾಲ್ಡ್, ಸಂಯುಕ್ತ ಕರ್ನಾಟಕ ಪತ್ರಿಕೆ ಹೀಗೆ ಪ್ರತಿಯೊಂದು ಪತ್ರಿಕೆಯವರೂ ಆ ಸ್ಥಳಕ್ಕೆ ಭೇಟಿನೀಡಿ ಸತ್ಯಾಂಶವನ್ನು ವರದಿ ಮಾಡಿರುವುದರಿಂದ ಬಹುಶಃ ನಿಜವಾಗಿ ಇದರಲ್ಲಿ ಸತ್ಯಾಂಶ ಇದೆ ಎಂದು ಈ ಸದನ ಭಾವಿಸುತ್ತದೆಂದು ನಾನಾದರೂ ತಿಳಿದಿದ್ದೇನೆ. ಇವತ್ತು ತಮಗೆ ಹೇಳುವುದಾದರೆ, ಜೋಡಿ ಕೃಷ್ಣಾಪುರ, ಕಿತ್ತನಕೆರೆ, ಜಾವಗಲ್ ಈ ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿಯ ಜನರನ್ನು ಖುದ್ದಾಗಿ ಭೇಟಿ ಮಾಡಿ ಅಲ್ಲಿ ನಡೆದಿರತಕ್ಕ ಹಿಂಸಾಚಾರದ ವಿಚಾರವನ್ನು ಪೂರ್ಣರೀತಿಯಲ್ಲಿ ಪ್ರಕಟ ಮಾಡಿದನಂತರ ನನ್ನನ್ನೂ ಕೂಡ ಭೇಟಿ ಮಾಡಿ ನನ್ನ ಹೇಳಿಕೆಯನ್ನೂ ತೆಗೆದುಕೊಂಡಿದ್ದಾರೆ.

ಕಿತ್ತನಕೆರೆ ಗ್ರಾಮದಲ್ಲಿ ಕೇಸ್ ನಂ.263:94, 12-12-94ರಲ್ಲಿ ನಡೆದಿರತಕ್ಕ ಘಟನೆ. ಇವತ್ತು ದುದ್ದ ಪೋಲೀಸ್ ಸ್ಟೇಷನ್‌ನಲ್ಲಿ ದಾಖಲೆಯಾಗಿದೆ. ಪ್ರಮುಖವಾಗಿ ನಡೆದಿರತಕ್ಕ ವಿಚಾರವನ್ನು ತಾವು ಕೇಳಬೇಕು. ಪಕ್ಷದ ಹೆಸರಿನಲ್ಲಿ ಜೈಕಾರ ಹಾಕಿಕೊಂಡು ಈ ರಾಜ್ಯದ ಮುಖ್ಯಮಂತ್ರಿಯ ಹೆಸರನ್ನು ಹೇಳಿಕೊಂಡು 7 ಮನೆಗಳ ಹೆಂಚುಗಳನ್ನು ಒಡೆಯುವುದನ್ನು ಮಾಡಿದ್ದಾರೆ. ಅಷ್ಟೇ ಅಲ್ಲ ಆ ಮನೆಯ ಗ್ಲಾಸ್‌ಗಳನ್ನು ಯಾವ ಮಟ್ಟದಲ್ಲಿ ಜಜ್ಜಿದ್ದಾರೆ ಎಂದರೆ ಪತ್ರಕರ್ತರು ಫೋಟೋ ಹಿಡಿದುಕೊಂಡು ಬಂದಿದ್ದಾರೆ. ಅವರ ಹತ್ತಿರ ವಿಚಾರ ಮಾಡಿದರೆ ತಮಗೆ ಮಾಹಿತಿ ಗೊತ್ತಾಗುತ್ತದೆ. ಇದರಲ್ಲಿ ಪಕ್ಷದ ವಿಚಾರ ನಾನು ಹೇಳುತ್ತಿಲ್ಲ. ಅಲ್ಲಿ ಬಿದ್ದಿದ್ದಂಥ ಕಲ್ಲುಗಳನ್ನು ಪತ್ರಕರ್ತರು ಪರೀಕ್ಷೆ ಮಾಡಿದ್ದಾರೆ. ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ. ಪಕ್ಷದ ಹೆಸರು ಹೇಳಿಕೊಂಡು ವಿಧಾನಸೌಧದಲ್ಲಿ ಇವತ್ತು ಬಾಗಿಲುಗಳನ್ನು ಮುರಿಯತಕ್ಕದ್ದು, ಗ್ಲಾಸ್‌ಗಳನ್ನು ಒಡೆಯತಕ್ಕದ್ದು, ಏನು ಮಾಡಿದ್ದಾರೆ ಅದೇರೀತಿಯಲ್ಲಿ ಪಕ್ಷದ ಹೆಸರನ್ನು ಮುಖ್ಯಮಂತ್ರಿಗಳ ಹೆಸರನ್ನು ಹೇಳಿಕೊಂಡು ಗ್ರಾಮದಲ್ಲಿ ಅಸಹಾಯಕರ ಮನೆಗಳ ಹೆಂಚುಗಳನ್ನು ಒಡೆಯತಕ್ಕದ್ದು, ಅವರ ಮನೆ ಗ್ಲಾಸುಗಳನ್ನು ಒಡೆಯತಕ್ಕ

ಕೆಲಸ ಏನು ಮಾಡಿದ್ದಾರೆ ಇದರ ಬಗ್ಗೆ ನಾವು ವೀಕ್ಷಣೆ ಮಾಡಿದುದಕ್ಕಿಂತ ಪತ್ರಕರ್ತರು ಮಾಡಿರತಕ್ಕ ಕೆಲಸ ನೋಡಿದರೆ ಬೇರೆ ವಿಚಾರಗಳನ್ನು ಹೇಳುವುದು ಬೇಕಾಗಿಲ್ಲ. ಅವರು ವಸ್ತುಸ್ಥಿತಿಯ ಪ್ರಕಟಣೆ ಕೂಡ ಪತ್ರಿಕೆಯಲ್ಲಿ ಮಾಡತಕ್ಕದ್ದು ಮಾಡಿದ್ದಾರೆ. ಅದನ್ನು ಇವತ್ತು ತರಿಸಿ ಸದನದಲ್ಲಿ ಚರ್ಚೆಗೆ ಅವಕಾಶ ಕೊಡತಕ್ಕದ್ದನ್ನು ಮಾಡಬೇಕು. ಎರಡನೆಯದು, ಅದೇ ಗ್ರಾಮದಲ್ಲಿ ಮಾಡಿರುವ ಇನ್ನೊಂದು ಅಕೃತ್ಯ ಎಂದರೆ 7 ದನಗಳನ್ನು ಒಬ್ಬ ಅಸಹಾಯಕರ ಮನೆಯಿಂದ ಕದ್ದುಕೊಂಡು ಹೊಡೆದುಕೊಂಡು ಹೋಗುವುದನ್ನು ಮಾಡಿದ್ದರು. ಇವತ್ತು ಕೇಸ್ ದಾಖಲೆ ನಂಬರನ್ನು ಕೂಡ ನಾನು ಹೇಳುತ್ತೇನೆ. ಐ.ಪಿ.ಸಿ. ಸೆಕ್ಷನ್ 380ರ ಪ್ರಕಾರ 12ನೇ ತಾರೀಖು ಕೇಸ್ ರಿಜಿಸ್ಟರ್ ಆಗಿದೆ. 7 ದನಗಳು. ಅದರ ಬಗ್ಗೆಯೂ ಕೂಡ ಅವರಿಂದ ಪತ್ರಕರ್ತರು ಕೇಳಿದ್ದಾರೆ ಹೇಗಾಯಿತು ? ಏನಾಯಿತು ? ಹೇಳಿ ಎಂದು. ಹೆದರಿಸಿ ದನಗಳನ್ನು ಇಂಥವರೇ ತುಂಬಿಕೊಂಡು ಹೋದರು. ಇಂಥ ವ್ಯಾನ್‌ನಲ್ಲಿ ತೆಗೆದುಕೊಂಡು ಹೋದರು ಎಂಬುದನ್ನು ಕೃಷ್ಣ ಎಂಬುವರನ್ನು ಅರೆಸ್ಟ್ ಮಾಡಿ ಪೋಲೀಸ್ ಸ್ಟೇಷನ್‌ನಲ್ಲಿ ತಂದಿಟ್ಟಾಗ ಪೂರ್ಣ ಮಾಹಿತಿ ಕೊಟ್ಟಿದ್ದಾನೆ. ಇದೇ ಡಿ.ವೈ.ಎಸ್.ಪಿಯವರು ಕುಳಿತುಕೊಂಡು ವಿಚಾರಣೆ ಮಾಡಿದ್ದಾರೆ. ಹೇಗೆ ಹೋಯಿತು, ಏನು ಹೋಯಿತು ಎಂಬ ಮಾತನ್ನು ಹೇಳಿದ್ದಾರೆ. ಆದಾದನಂತರ ಇಂಥಿಂಥವರ ಮೂಲಕ ಹೋಯಿತು ಎಂದು ವಿಚಾರಗಳನ್ನು ತಿಳಿಸಿದ ಮೇಲೆ ಅವರನ್ನು ದಸ್ತಗಿರಿ ಮಾಡಿ ಪೋಲೀಸ್ ಸ್ಟೇಷನ್‌ಗೆ ತಂದರೆ ಯಾರು ಅವರನ್ನು ಮತ್ತೆ ಬಿಡಿಸತಕ್ಕ ವಿಚಾರ ಮಾಡಿದರು ಎಂಬುದನ್ನು ನಾನು ಇಲ್ಲಿ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರಿಗೆ ಗುಪ್ತದಳದವರು ಇದ್ದಾರೆ. ಎಸ್.ಪಿ.ಯವರ ಹತ್ತಿರ ಹೋಗಿ ಎಸ್.ಪಿ.ಯವರ ಮನೆ ಹತ್ತಿರ ಕುಳಿತು ಎಸ್.ಪಿ. ಕಛೇರಿಯಲ್ಲಿ ಕುಳಿತು ಅವರನ್ನು ಬಿಡಿಸಬೇಕು ಎನ್ನತಕ್ಕ ಕೆಲಸವನ್ನು ಮಾಡಿ ವಾಸು ಎನ್ನುವವರನ್ನು ಬಿಡಿಸತಕ್ಕದ್ದನ್ನು ಏನು ಮಾಡಿದ್ದಾರೆ ಅದನ್ನು ಇವತ್ತು ಸದನದ ಮೂಲಕ ವಿಚಾರಣೆ ಮಾಡಬೇಕು. ಇದರಲ್ಲಿ ಸತ್ಯ ಹೇಳುತ್ತಿದ್ದೇನೆ. ನಾವು ಇದರಲ್ಲಿ ಯಾರ ಹೆಸರನ್ನೂ ಪ್ರಸ್ತಾಪ ಮಾಡಲಿಲ್ಲ ಇಲ್ಲಿ, ಅಧ್ಯಕ್ಷರೆ, ತಾವು ಇಲ್ಲಿ ನನಗೆ ಅನುಮತಿ ಕೊಟ್ಟಿದ್ದೀರಿ. ನಾನು ಮಾತನಾಡುತ್ತಿದ್ದೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ:– ನನಗೆ ಅವಕಾಶ ಕೊಡಬೇಕು ಎರಡು ನಿಮಿಷ.

ಶ್ರೀ ಬಿ. ಶಿವರಾಮು:– ಕೊಡಬಹುದು. ಸದನಕ್ಕೆ ಅವಕಾಶ ಇದೆ. ನಾನು ಯಾರ ಹೆಸರನ್ನೂ ಹೇಳಿಲ್ಲ. ಗುಪ್ತದಳ ಇದೆ ಎಂದು ಹೇಳಿದ್ದೇನೆ.

ಅಧ್ಯಕ್ಷರು:– ಪುಟ್ಟೇಗೌಡರೆ, ಕುಳಿತುಕೊಳ್ಳಿ. ಮುಖ್ಯಮಂತ್ರಿಗಳಿದ್ದಾರೆ ಅದಕ್ಕೆಲ್ಲಾ ಜವಾಬು ಹೇಳುವುದಕ್ಕೆ.

ಶ್ರೀ ಬಿ. ಶಿವರಾಮು:– ಅದಕ್ಕೆ ಬೇಕಾಂಥ ವಿಶೇಷವಾದ ಇಲಾಖೆ ಇದೆ. ಯಾರು ಮಾಡಿದರು ಎಂಬ ವಿಚಾರವನ್ನು ಹಗಲುಮುಟ್ಟಿ ನೋಡಿಕೊಳ್ಳತಕ್ಕ ಕೆಲಸ ಬೇಡ. ನಾನು ನಡೆದಿರುವ ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಡಿವೈ.ಎಸ್.ಪಿ.ಯವರನ್ನು ರೂರಲ್ ಪೋಲೀಸ್ ಸ್ಟೇಷನ್‌ನಲ್ಲಿ ಕೇಳಿದಾಗ ಕೃಷ್ಣ ಎನ್ನುವವರು ಇಂಥಿಂಥವರು ಮಾಡಿದರು ಎಂದು ಹೇಳಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೋ ಇಲ್ಲವೋ ಅದು ಸ್ಪಷ್ಟೀಕರಣ ಆಗಲಿ. ಆದಾದನಂತರ ಎಸ್.ಪಿ.ಯವರನ್ನು ಒತ್ತಡ ಮಾಡಿ ಒತ್ತೆ ಕರೆದುಕೊಂಡು ಹೋಗಿ ಆ ಹೇಳಿಕೆಯನ್ನು ಮರುಪರಿಶೀಲಿಸಿ ಇಲ್ಲ ಎಂದು ಅವರಿಬ್ಬರನ್ನು ಬಿಡಿಸತಕ್ಕ ಕೆಲಸ ಮಾಡಿದ್ದಾರೆ. ಅದು ಹೇಗಾಯಿತು ? ಇವತ್ತು ನಾನು ಹೇಳುತ್ತಿದ್ದೇನೆ. ತಮಗೆ ಬೇಕಾದಂಥ, ಈ ಸದನದ ಹಿರಿಯ ಸದಸ್ಯರನ್ನು ಕಳುಹಿಸಿ. ಬೇಡ, ಹಿರಿಯ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ತನಿಖೆ ಮಾಡುತ್ತಾರೆ ಎನ್ನುವವರನ್ನು, ಅವರಿಗೆ ನಂಬಿಕೆ ಇರತಕ್ಕವರನ್ನು ಗ್ರಾಮಕ್ಕೆ ಕಳುಹಿಸಿ, ಇವತ್ತು ಏನು ನಡೆದಿದ ಸತ್ಯಾಂಶ ಎಂಬುದನ್ನು ಹೇಳಿ ಆಮೇಲೆ ನಮಗೆ ಉತ್ತರ ಕೊಡಲಿ. ನಾನು ಯಾರ ಮೇಲೂ ವೈಯಕ್ತಿಕವಾಗಿ ಮಾತನಾಡುತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು:– ಅಧ್ಯಕ್ಷರೆ, ಅವರ ಮುಖಾಂತರವೇ ನಡೆದಿರುವಂತೆ ಅವರು ಭಾಷಣ ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳನ್ನು ತಾವು ನೋಡಿದಹಾಗೆ ಭಾಷಣ ಮಾಡುತ್ತಿದ್ದಾರೆ.

ಶ್ರೀ ಬಿ. ಶಿವರಾಮು:– ಇವತ್ತು ನಾನು ಪೂರ್ಣ ಮಾತನಾಡುತ್ತಿಲ್ಲ. ಇನ್ನೂ ಹೆಚ್ಚಿಗೆ ಮಾಹಿತಿ ಇದೆ. ನಮಗೆ ನಿಲುವಳಿ ಸೂಚನೆಗೆ ಇದು ಅತ್ಯಾವಶ್ಯಕ ಎಂಬುದಕ್ಕೆ ಸ್ಪಷ್ಟೀಕರಿಸುವುದು ಅಷ್ಟೆ.

ಶ್ರೀ ನಾರಾಯಣ ಸ್ವಾಮಿ:– ಪಾಯಿಂಟ್ ಆಫ್ ಆರ್ಡರ್ ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು:– ಏನೂ ಬೇಡ ಬಿಡಿ. ಇಟ್ಟುಕೊಂಡಿರಿ. ಬೇರೆ ಸಮಯದಲ್ಲಿ ಉಪಯೋಗಿಸಿಕೊಳ್ಳೋಣ.

ಶ್ರೀ ನಾರಾಯಣ ಸ್ವಾಮಿ:– ಅಧ್ಯಕ್ಷರೆ, ಡೀಟೈಲಾಗಿ ಹೋಗುತ್ತಿದ್ದಾರೆ. ನಾನು ಅವರ ನಿಲುವಳಿ ಸೂಚನೆಗೆ ಅಡ್ಡ ಬರುವುದಿಲ್ಲ. ಅವರು ಡೀಟೈಲ್‌ಗೆ ಹೋಗುತ್ತಿದ್ದಾರೆ. ಅದು ಆಗಬಾರದು ಅಷ್ಟೆ. ತಮ್ಮ ಇಷ್ಟ. ಆದರೆ ಅವರು ಟೀಟೈಲ್ಸ್‌ಗೆ ಹೋಗುತ್ತಿದ್ದಾರೆ. ಡೀಟೈಲಾಗಿ ಎಲ್ಲವನ್ನೂ ವಿಸ್ತತವಾಗಿ ಹೇಳುತ್ತಿದ್ದಾರೆ. ದಯಮಾಡಿ ಇದು ಆಗಬಾರದು.

ಅಧ್ಯಕ್ಷರು:– ಕುಳಿತುಕೊಳ್ಳಿ.

ಶ್ರೀ ಸಿ.ಎಸ್. ಪುಟ್ಟೇಗೌಡ:– ಅಧ್ಯಕ್ಷರೆ, ನಾವು ಕಿರಿಯ ಸದಸ್ಯರು. ಹೆಚ್ಚು ಕಡಿಮೆ ಮಾಡಿದರೆ ಹೇಳಬೇಕು.

ಅಧ್ಯಕ್ಷರು:– ಪುಟ್ಟೇಗೌಡರೆ, ಕುಳಿತುಕೊಳ್ಳಿ. ತಾವು ಹೊಸಬರಿದ್ದೀರಿ. ಏನೂ ತೊಂದರೆ ಇಲ್ಲ. ಕುಳಿತುಕೊಳ್ಳಿ.

ಶ್ರೀ ಬಿ. ಶಿವರಾಮು:– ಈಗ ಎರಡನೇ ವಿಚಾರ ಅಧ್ಯಕ್ಷರೆ.

ಅಧ್ಯಕ್ಷರು:– ಮತ್ತೆ ಎರಡನೆಯದೇ 20 ಹೇಳಿ ಬಿಟ್ಟಿದ್ದೀರಿ.

ಶ್ರೀ ಬಿ. ಶಿವರಾಮು:– ಎರಡನೇ ಗ್ರಾಮದ ವಿಚಾರ. ಒಂದು ಗ್ರಾಮದಲ್ಲಿ ನಡೆದ ಘಟನೆ ಹೇಳಿದೆ.

ಅಧ್ಯಕ್ಷರು:– ಹೇಳಿ. ಹೇಳಿ.

ಶ್ರೀ ಬಿ. ಶಿವರಾಮು:– ಎರಡನೆಯದು ಅಧ್ಯಕ್ಷರೆ, ಜೋಡಿ ಕೃಷ್ಣಾಪುರ ಎನ್ನತಕ್ಕ ಗ್ರಾಮ. ಅದರಲ್ಲಿ ಹೊಂಬಾಳಯ್ಯ, ಸುರೇಶ್ ಎನ್ನುವವರು ಕೇಸನ್ನು ಕೊಟ್ಟಿದ್ದಾರೆ. ಕೇಸ್ ನಂಬರ್ 258:94. 12–12–94ರಲ್ಲಿ ಸೆಕ್ಷನ್ 143, 223 ಎಲ್ಲಾ ಆಗಿದೆ.

12ನೇ ತಾರೀಖು ಹರಿಜನರ ಮನೆಗೆ ನುಗ್ಗಿ ಗಲಾಟೆ ಮಾಡಿದ್ದಾರೆ. ಅಟ್ರಾಸಿಟಿಸ್ ಕೇಸ್. ಏನು ನಡೆದಿದೆ ಎಂಬುದರ ಬಗ್ಗೆ ವಿಚಾರಣೆ ಮಾಡಿ. ಆವತ್ತು ಶಂಕ ಗ್ರಾಮದಲ್ಲಿ ಬಸ್ಸಿನಲ್ಲಿ ಹೋಗುತ್ತಿದ್ದ ಹರಿಜನರನ್ನು ತಡೆ ಹಾಕಿ ಬಸ್ಸನ್ನು ನಿಲ್ಲಿಸಿ ಎಳೆದುಕೊಂಡು ಹೊಡೆಯತಕ್ಕ ಕೆಲಸ ಮಾಡಿದ್ದಾರೆ. ಡಿ.ಐ.ಜಿ.ಯವರು ಅಲ್ಲಿಗೆ ಹೋಗಿ ಬಂದಿದ್ದಾರೆ. ಮೈಸೂರಿನ ಶಂಕ ಗ್ರಾಮಕ್ಕೆ ಅಷ್ಟೆ. ಆದರೆ ಅಲ್ಲಿರತಕ್ಕ ಜಿಲ್ಲಾಧಿಕಾರಿಗಳು ಮಾತ್ರ ಇಂತಹ ಅಟ್ರಾಸಿಟಿಸ್ ನಡೆಯತಕ್ಕ ಗ್ರಾಮಗಳಿಗೆ ಹೋಗಿ ಭೇಟಿ ಕೊಡತಕ್ಕ ಕೆಲಸ ಮಾಡಲಿಲ್ಲ. ನಾನು ಏಕೆ ಇದನ್ನು ವಿಶೇಷವಾಗಿ ಹೇಳುತ್ತಿದ್ದೇನೆಂದರೆ, ನನ್ನ ಕ್ಷೇತ್ರದಲ್ಲಿ ಮಾಜಿ ಶಾಸಕರ ಕೊಲೆಯಾಯಿತು. ಅವತ್ತು ಅದಕ್ಕೆ ಕಾರಣ ಪ್ರಮುಖವಾಗಿ ಹರಿಜನರ ಮೇಲೆ ಮೊದಲು ನಡೆದಂಥ ಘಟನೆ ಅವತ್ತು ಹಿರಿಯ ಅಧಿಕಾರಿಗಳು ಪಿ.ಸಿ.ಆರ್. ಅಟ್ರಾಸಿಟಿಸ್ ಕೇಸ್ ಆದರೆ ಸ್ಥಳಕ್ಕೆ ಭೇಟಿ ಕೊಡಬೇಕು. ಏಕೆಂದರೆ ಕೂಡಲೇ ಸ್ಥಳದಲ್ಲಿ ಸಮಸ್ಯೆಯನ್ನು ಬಗೆಹರಿಸಿದರೆ

ಮುಂದುವರಿಯುವುದಿಲ್ಲ ಎನ್ನತಕ್ಕ ವಿಚಾರ. ಆದರೆ ಅದರ ಬಗ್ಗೆ ಗಮನಹರಿಸದಿದ್ದುದರಿಂದ ಮಾಜಿ ಶಾಸಕರ ಕೊಲೆಯಾಗಿ ನನ್ನ ಕ್ಷೇತ್ರದಲ್ಲಿ ಗೊಂದಲಮಯ ವಾತಾವರಣ ಸೃಷ್ಟಿಯಾಗಿದೆ.

ಶ್ರೀ ಸಿ.ಎಸ್. ಪುಟ್ಟೇಗೌಡ:– ಸರ್ಕಾರ ಯಾರದ್ದು ಇತ್ತು?

ಅಧ್ಯಕ್ಷರು:– ಎಲ್ಲೆಲ್ಲೋ ಹೋಗುತ್ತಿದ್ದೀರಿ ಶಿವರಾಮ್‌ರವರೆ ....

ಶ್ರೀ ಬಿ. ಶಿವರಾಮು:– ಜೋಡಿ ಕೃಷ್ಣಾಪುರ ಗ್ರಾಮದಲ್ಲಿ ಹರಿಜನರ ಮೇಲೆ ....

ಅಧ್ಯಕ್ಷರು:– ನನ್ನ ಮಾತನ್ನು ಕೇಳಿ. ಇದಕ್ಕೆ ಸೀಮಿತವಾಗಿ ಮಾತನಾಡಿದರೆ ವಿಷಯದ ಗಾಂಭೀರ್ಯ ಉಳಿಯುತ್ತದೆ. ಗಂಡಸಿ ಚರಿತ್ರೆಯನ್ನೇ ಹೇಳಿದರೆ ವಿಷಯದ ಗಾಂಭೀರ್ಯ ಹೋಗುತ್ತದೆ. ದಯಮಾಡಿ ಸಂಕ್ಷಿಪ್ತವಾಗಿ ಮಾತನಾಡಿ. ಪುಟ್ಟೇಗೌಡರೆ ಕುಳಿತುಕೊಳ್ಳಿ.

ಶ್ರೀ ಬಿ. ಶಿವರಾಮು:– ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಆದದ್ದನ್ನು ಹೇಳುತ್ತಿದ್ದೇನೆ. ಜೋಡಿ ಕೃಷ್ಣಾಪುರದ ಹರಿಜನರ ಮೇಲೆ ನಡೆದಿರತಕ್ಕ ಘಟನೆಯ ಬಗ್ಗೆ ಈ ಸರ್ಕಾರ ಏನು ಕ್ರಮ ತೆಗೆದುಕೊಳ್ಳತಕ್ಕ ಕೆಲಸ ಮಾಡಿದೆ? ಮತ್ತೆ ಶಂಕ ಗ್ರಾಮದಲ್ಲಿ ಹರಿಜನರ ಮೇಲೆ ನಡೆದಿರತಕ್ಕ ದೌರ್ಜನ್ಯದ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ, ಏನು ವ್ಯವಸ್ಥೆಯಾಗಿದೆ ಎನ್ನತಕ್ಕ ವಿಚಾರ. ಈ ರೀತಿ ಬಹಳಷ್ಟು ಗ್ರಾಮಗಳು ಹೊಸಪುಕ್ಕಲು ಗ್ರಾಮದಲ್ಲಿ 23–12–94ಕ್ಕೆ ಕೇಸ್ ನಂ.ಐಪಿಸಿ 272,273 ರಿಜಿಸ್ಟರ್ ಆಗಿದೆ. ಈ ರೀತಿ ಇನ್ನೂ ಸಾಕಷ್ಟು ನಾಗೇನಹಳ್ಳಿ. ಬಾಚೇನಹಳ್ಳಿಯಲ್ಲಿ ಹುಲ್ಲಿನ ಮೆದೆಗಳನ್ನು ಸುಡತಕ್ಕ ಕೆಲಸದ ಬಗ್ಗೆ ಪತ್ರಿಕೆಯಲ್ಲೂ ಪ್ರಕಟವಾಗಿದೆ. ಅದೇ ರೀತಿ ಜಾವಗಲ್‌ನಲ್ಲಿ ಪತ್ರಿಕಾ ಕರ್ತರನ್ನು ಹೆದರಿಸತಕ್ಕ ಕೆಲಸವಾಗಿದೆ. ಅದನ್ನು ಪತ್ರಿಕೆಯವರು ವಿಚಾರಣೆ ಮಾಡಿದ್ದಾರೆ. ಏನು ನಡೆಯಿತು? ಹೇಗೆ ಆಯಿತು ಎನ್ನತಕ್ಕದ್ದನ್ನೂ ಕೂಡ ಹೇಳಿದ್ದಾರೆ. ಈ ರೀತಿಯಾಗಿ ಬಾಳೇನಹಳ್ಳಿಯಲ್ಲಿ ಮೊನ್ನೆ – ನಿನ್ನೆ ಕೂಡ ಗಲಾಟೆಯಾಗಿದೆ. ಈ ರೀತಿ ನನ್ನ ಕ್ಷೇತ್ರದ ಬಹಳಷ್ಟು ಗ್ರಾಮಗಳಲ್ಲಿ ವಿಶೇಷವಾಗಿ ಪಕ್ಷದ ಹೆಸರನ್ನು ಹೇಳತಕ್ಕಂಥದ್ದು, ಮಾನ್ಯ ಮುಖ್ಯ ಮಂತ್ರಿಗಳ ಹೆಸರನ್ನು ಹೇಳುವುದರ ಮೂಲಕ ಮಾಡಿದ್ದಾರೆ. ನೀವು ಜನತಾ ಪಾರ್ಟಿಯವರನ್ನು ಗೆಲ್ಲಿಸಲಿಲ್ಲ. ಗೆಲ್ಲಿಸಿದ್ದರೆ ಇವತ್ತು ಮಂತ್ರಿಗಳಾಗುತ್ತಿದ್ದರು. ಅಂಥದ್ದನ್ನು ತಪ್ಪಿಸಿ ನೀವು ಅನ್ಯಾಯ ಮಾಡಿದ್ದೀರಿ, ಅದಕ್ಕೋಸ್ಕರ ನಿಮಗೆ ಪಾಠ ಕಲಿಸುತ್ತೇವೆ ಎನ್ನುವ ಮಾತನ್ನು ಒತ್ತಿ ಒತ್ತಿ ಹೇಳುವುದರ ಮೂಲಕ ಇವತ್ತು ಆ ಕ್ಷೇತ್ರದಲ್ಲಿರುವ ನನ್ನ ಪಕ್ಷದ ಮತದಾರರಿಗೆ ಕಾರ್ಯಕರ್ತರೊಳಗೆ ಅಶಾಂತಿ ವಾತಾವರಣ ಸೃಷ್ಟಿಯಾಗಿದೆ. ಗೊಂದಲಮಯ ವಾತಾವರಣ ಸೃಷ್ಟಿಯಾಗಿದೆ. ಅಸಹಾಯಕರಿಗೆ ರಕ್ಷಣೆ ಇಲ್ಲದೆ ಇರತಕ್ಕಂಥದ್ದು, ನನ್ನ ಕ್ಷೇತ್ರದಲ್ಲಿ ವಿಶೇಷವಾಗಿ ಕಾಣುತ್ತಿದ್ದೇನೆ. ಅದಕ್ಕೋಸ್ಕರ ತಾವು ಈ ನಿಲುವಳಿ ಸೂಚನೆ ಮೇಲೆ ನಮಗೆ ಚರ್ಚೆ ಮಾಡಲು ಈ ಸದನದಲ್ಲಿ ಅವಕಾಶ ಕೊಟ್ಟು, ನಿಷ್ಪಕ್ಷಪಾತವಾಗಿ ಯಾವ ಪಕ್ಷ ಭೇದ ಇಲ್ಲದೆ ಕಾನೂನು – ರಕ್ಷಣೆ ಈ ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬ ಶ್ರೀ ಸಾಮಾನ್ಯನಿಗೂ ದೊರೆಯಬೇಕು ಎನ್ನುವ ದೃಷ್ಟಿಯಿಂದ ತಾವು ಅವಕಾಶಕೊಟ್ಟು ಗೊಂದಲ ವಾತಾವರಣವನ್ನು ತಪ್ಪಿಸಲು ತಾವು ಅವಕಾಶ ಮಾಡಿಕೊಡಬೇಕೆಂದು ಹೇಳಿ, ತಾವು ಇಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶಮಾಡಿಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು:– ಶ್ರೀ ಪ್ರತಾಪ ಚಂದ್ರಶೆಟ್ಟಿಯವರು ಶ್ರೀ ಬಸವಯ್ಯನವರೆ ತಾವು ಮಾಜಿ ಸಚಿವರಾಗಿದ್ದವರು, ಹಿರಿಯ ಸದಸ್ಯರು, ತಾವು ಇದಕ್ಕೆ ಸಿಗ್ನೇಟರಿ ಅಲ್ಲ. ತಾವು ಈ ವಿಷಯದ ಮೇಲೆ ಮಾತನಾಡಲು ನಿಯಾಮಾವಳಿಗಳ ಪ್ರಕಾರ ಅವಕಾಶ ಇಲ್ಲ.

ಶ್ರೀ ಎನ್. ಬಸವಯ್ಯ:– ನಾನು ಆ ವಿಷಯ ಕೇಳುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ......

ಅಧ್ಯಕ್ಷರು:– ಅದಕ್ಕೆ ಬೇರೆ ಅವಕಾಶ ಇದೆ.

† ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕಂದಾಪುರ):– ಮಾನ್ಯ ಅಧ್ಯಕ್ಷರೆ, ಈ ನಿಲುವಳಿ ಸೂಚನೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು ಮತ್ತು ಈ ಚರ್ಚೆ ನಡೆಯಬೇಕೆಂಬುದು ನಮ್ಮ ಉದ್ದೇಶ. ಏಕೆಂದರೆ ಚುನಾವಣೆ ನಂತರ ಆಗಿರತಕ್ಕ ಘಟನೆಗಳಿಗೆ ನೇರವಾಗಿ ನಿಮ್ಮ ಸರ್ಕಾರ ಜವಾಬ್ದಾರಿ ಎನ್ನತಕ್ಕ ಮಾತನ್ನು ನಾನು ಹೇಳುತ್ತಿಲ್ಲ ಅಥವಾ ಅಲ್ಲಿರತಕ್ಕ ಪೋಲೀಸ್ ಅಧಿಕಾರಿಗಳು ಇದಕ್ಕೆ ನೇರವಾಗಿ ಜವಾಬ್ದಾರರು ಎನ್ನತಕ್ಕ ಮಾತನ್ನೂ ಸಹ ನಾನು ಹೇಳುತ್ತಿಲ್ಲ. ಆದರೆ ಈ ಘಟನೆಗಳಿಗೆ ಕಾರಣವನ್ನು ಹುಡುಕತಕ್ಕಂಥ ಜವಾಬ್ದಾರಿ ಸರ್ಕಾರದ್ದು. ಈ ಒಂದು ಚುನಾವಣೆ ಫಲಿತಾಂಶದ ನಂತರ ಏನು ಘಟನೆಗಳು ಆಗುತ್ತಿವೆ. ಆ ಘಟನೆಗಳ ಬಗ್ಗೆ ನಾವು ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ನಮ್ಮ ತಾಲ್ಲೂಕಿನಲ್ಲಿ ನಡೆದಂಥ ಘಟನೆಗಳ ಬಗ್ಗೆ ಪೋಲೀಸ್‌ನವರು ಏನು ಕೆಲಸ ಮಾಡಿದ್ದಾರೆ ? ಯಾವ ಯಾವ ಘಟನೆಗಳಲ್ಲಿ ಏನೇನು ಕೇಸುಗಳನ್ನು ದಾಖಲು ಮಾಡಿಕೊಂಡಿದ್ದಾರೆ ? ಆ ಅಪರಾಧಿಗಳನ್ನು ಹಿಡಿಯತಕ್ಕದ್ದರಲ್ಲಿ ಅವರು ಏನಾದರೂ ಕೆಲಸ ಮಾಡಿದ್ದಾರೆಯೇ ? ಎನ್ನತಕ್ಕದ್ದನ್ನು ಪರಿಶೀಲನೆ ಮಾಡಬೇಕು.

ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ಇದನ್ನು ತಾವು ಹಾಗೆಯೇ ಬಿಟ್ಟರೆ ಇಂತಹ ಘಟನೆಗಳು ಸರಮಾಲೆಯಾಗಿ ಮುಂದುವರಿದುಕೊಂಡು ಹೋಗಬಹುದು. ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಒಂದು ಪಕ್ಷ ಅತ್ಯಧಿಕ ಮತಗಳನ್ನು ಗಳಿಸಿ ಅಧಿಕಾರಕ್ಕೆ ಬಂದಿರುವುದನ್ನು ನಾವು ಕಾಣುತ್ತೇವೆ. ಅಲ್ಲಿ ಕೋಮುಭಾವನೆಯನ್ನು ಬಿತ್ತತಕ್ಕ ಕೋಮು ಪ್ರಚೋದನೆ ಮಾಡತಕ್ಕ ಅಲ್ಪಸಂಖ್ಯಾತರಿಗೆ ಬೆದರಿಕೆಯನ್ನು ಹಾಕತಕ್ಕ ಕೆಲಸ ನಡೆಯುತ್ತಿದೆ. ಪೋಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೈಟ್ ಕೊಟ್ಟರೆ ಕೇಸನ್ನು ದಾಖಲು ಮಾಡುವುದಿಲ್ಲ. ತಾವು ಅಲ್ಪಸಂಖ್ಯಾತರ ಮತವನ್ನು ಗಳಿಸಿ ಅಧಿಕಾರಕ್ಕೆ ಬಂದಿದ್ದೀರಿ. ತಮ್ಮದೇ ಸರ್ಕಾರ ಅಧಿಕಾರಕ್ಕೆ ಬಂದಿರತಕ್ಕ ಸಂದರ್ಭದಲ್ಲಿ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡತಕ್ಕ ಜವಾಬ್ದಾರಿ ತಮ್ಮದು ಇದೆ. ಈವೊಂದು ವಿಚಾರದಲ್ಲಿ ತಾವು ಚರ್ಚೆಗೆ ವಿಶೇಷವಾಗಿ ಅವಕಾಶವನ್ನು ಕಲ್ಪಿಸಿಕೊಡದಿದ್ದರೆ ಮುಂದೆ ಆಗತಕ್ಕ ಎಲ್ಲಾ ಅನಾಹುತಗಳಿಗೆ ತಮ್ಮ ಸರ್ಕಾರ ಜವಾಬ್ದಾರಿ ಆಗಬೇಕಾದ ಪರಿಸ್ಥಿತಿ ಬರುತ್ತದೆ. ಸಾಮಾನ್ಯವಾಗಿ ಎಷ್ಟು ಘಟನೆಗಳು ನಡೆದಿವೆ. ತಾವು ತಮ್ಮ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಮಹಿಳೆಯರಿಗೆ ಸಮಾನ ಅಧಿಕಾರವನ್ನು ಕೊಡುತ್ತೇವೆ ಎನ್ನುವ ವಿಚಾರವನ್ನು ಹೇಳಿದ್ದೀರಿ. ಮಹಿಳೆಯರಿಗೆ ಅಧಿಕಾರವನ್ನು ಕೊಡುತ್ತೇವೆಂದು ಹೇಳುತ್ತೀರಿ. ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ಮಹಿಳೆಯ ಮನೆಗೆ ರಾತ್ರಿ 11–30 ಗಂಟೆಗೆ ನುಗ್ಗಿ ಅವರ ಬಗ್ಗೆ ಅವಹೇಳನಕರವಾದ ಮಾತುಗಳನ್ನು ಆಡಿ ಆಕೆಯ ಗಂಡನಿಗೆ ಕೊಲೆ ಬೆದರಿಕೆಯನ್ನು ಹಾಕಿರತಕ್ಕ ಪ್ರಕರಣದ ಕೇಸು ದಾಖಲಾಗಿದೆ. ಇದರ ಅರ್ಥ, ಯಾವರೀತಿಯ ವ್ಯವಸ್ಥೆ, ಆಡಳಿತದಲ್ಲಿದೆ ಎಂಬುದನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇಂತಹ ಪರಿಸ್ಥಿತಿಗಳು ಪದೇ ಪದೇ ಆಗುತ್ತಿದ್ದರೆ, ಇದನ್ನು ಸುಧಾರಿಸತಕ್ಕ ಸರಿಯಾದ ವ್ಯವಸ್ಥೆಯನ್ನು ತರತಕ್ಕ ಜವಾಬ್ದಾರಿ ತಮ್ಮ ಮೇಲಿದೆ. ಈ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುವುದಕ್ಕೆ ಅವಕಾಶ ಬೇಕಾಗುತ್ತದೆ. ಪ್ರತಿ ಗ್ರಾಮಗಳಲ್ಲಿ ಆಗಿರತಕ್ಕ ಘಟನೆಗಳ ಬಗ್ಗೆ ಹೇಳುತ್ತಿದ್ದೇನೆ. ಬಸ್ಸಿನಲ್ಲಿ ಹೋಗತಕ್ಕ ವ್ಯಕ್ತಿಯನ್ನು ಎಳದು ತಲವಾರಿನಿಂದ ಹೊಡೆದು ಆತನ ಕಾಲು ಫ್ರಾಕ್ಚರ್ ಆಗಿದೆ. ಇದರ ಬಗ್ಗೆ ದೂರುಕೊಟ್ಟರೆ ಸಾಮಾನ್ಯವಾಗಿ ಪೋಲೀಸ್ ಸ್ಟೇಷನ್‌ನಲ್ಲಿ ಹಾಕತಕ್ಕ ಸೆಕ್ಷನ್ ಹಾಕಿ ಅಪರಾಧ ಮಾಡಿರುವವನ್ನು ಬಿಟ್ಟಿದ್ದಾರೆ. ಈವೊಂದು ವ್ಯವಸ್ಥೆಯನ್ನು ನೋಡಿದರೆ ಬಹುಶಃ ಕೆಲವು ಅಧಿಕಾರಿಗಳು ರಾಜಕೀಯ ಪಕ್ಷಕ್ಕೆ ಸೇರಿದವರು ಎನ್ನುವ ಭಾವನೆ ಬರುತ್ತದೆ. ಮತದಾರರು ಇರುತ್ತಾರೆ. ರಾಜಕಾರಣಿಗಳು ಇರುತ್ತಾರೆ. ಬೇರೆ ಬೇರೆ ಪಕ್ಷದವರು ಇರುತ್ತಾರೆ. ಅದೇರೀತಿ ಪೋಲೀಸ್ ಅಧಿಕಾರಿಗಳು ಕೆಲವೊಂದು ರಾಜಕೀಯ ಪಕ್ಷದ ಏಜೆಂಟರಾಗಿ ಕೆಲಸ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅಂತಹ ಅಧಿಕಾರಿಗಳನ್ನು ಸರ್ಕಾರ

ಹಾಕಿಕೊಂಡಿದೆಯೆಂದು ನಾವು ಹೇಳುತ್ತಿದ್ದೇವೆ. ಹೀಗೆ ಮಾಡತಕ್ಕ ಅಧಿಕಾರಿಗಳನ್ನು ಹಾಕಿಕೊಂಡರೆ ಹೇಗೆ? ಇಂತಹ ಅಧಿಕಾರಿಗಳ ಬಗ್ಗೆ ತನಿಖೆ ನಡೆಸಿ ಏಕೆ ಅವರು ಕೇಸು ದಾಖಲಾತಿ ಮಾಡಲಿಲ್ಲ? ಏಕೆ ಇಂತಹ ಅನಾಹುತಗಳಿಗೆ ಕಾರಣರಾಗಿದ್ದಾರೆ ಎನ್ನತಕ್ಕ ಸಂಪೂರ್ಣವಾದ ವಿವರವನ್ನು ತರಿಸಿಕೊಂಡು ಈ ಬಗ್ಗೆ ಏನು ಆಗ ಬೇಕಾಗಿದೆ ಎನ್ನುವುದನ್ನು ನೋಡಿ ಜನರಲ್ಲಿ ವಿಶ್ವಾಸ ಮೂಡಿಸತಕ್ಕ ಕೆಲಸ ತಮ್ಮ ಸರ್ಕಾರದ ವತಿಯಿಂದ ಆಗಬೇಕಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಪ್ರತಿ ಗ್ರಾಮದಲ್ಲಿ ನಡೆದ ಘಟನೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಈ ನಿಲುವಳಿ ಸೂಚನೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿ):- ಮಾನ್ಯ ಅಧ್ಯಕ್ಷರೆ, ಈ ಸದನದ ಹಿರಿಯ ಮುಖಂಡರಾದ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಹಿರಿಯ ಕಾಗೋಡು ತಿಮ್ಮಪ್ಪನವರು, ಶಾಸಕಮಿತ್ರರಾದ ಶಿವರಾಮ್‌ರವರು ಮತ್ತು ಪ್ರತಾಪಚಂದ್ರಶೆಟ್ಟಿಯವರು, ಜಯಚಂದ್ರರವರು ಏನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಪೂರ್ಣವಾದ ವಿವರವನ್ನು ತರಿಸಬೇಕಾಗುತ್ತದೆ. ಸಭೆಯಲ್ಲಿ ಉತ್ತರ ಕೊಡತಕ್ಕ ಕಾಲದಲ್ಲಿ ಅಲ್ಲಿ ನಡೆದಿರತಕ್ಕ ವಸ್ತುಸ್ಥಿತಿ ಏನಿದೆ ಆ ಮಾಹಿತಿಯನ್ನು ತರಿಸಬೇಕಾಗುತ್ತದೆ. ಅಧಿಕಾರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ತರಿಸಬೇಕಾಗುತ್ತದೆ. ಆ ಎಲ್ಲಾ ವಿವರಗಳನ್ನು ತರಿಸಿ ಸಭೆ ನಾಳೆ ಮತ್ತು ನಾಡಿದ್ದು ನಡೆಯುತ್ತಿರುವುದರಿಂದ ಅದರ ಬಗ್ಗೆ ಸುದೀರ್ಘವಾದ ಉತ್ತರವನ್ನು ಕೊಡಲಿಕ್ಕೆ ತಯಾರಾಗಿದ್ದೇನೆಂದು ಸಭೆಗೆ ಆಶ್ವಾಸನೆ ಕೊಡುತ್ತೇನೆ. ಬಹುಶಃ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಮತ್ತಷ್ಟು ಬೆಳಕು ಚೆಲ್ಲಬಹುದು. ಕೆಲವು ಸದಸ್ಯರು ಮಾತನಾಡಲಿಕ್ಕೆ ಅವಕಾಶವನ್ನು ಕೇಳಿದರು ತಾವು ನಿಯಮಗಳ ಪ್ರಕಾರ ಸಾಧ್ಯವಿಲ್ಲವೆಂದು ತೀರ್ಪು ಕೊಟ್ಟಿದ್ದೀರಿ. ಇನ್ನು ಅನೇಕ ಸದಸ್ಯರು ಮಾತನಾಡುವವರು ಇದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಏನೇನು ದೌರ್ಜನ್ಯಗಳು ನಡೆದಿವೆ, ಏನೇನು ಅನಾಹುತಗಳು ನಡೆದಿವೆ, ಅದೆಲ್ಲವನ್ನು ಸುದೀರ್ಘವಾಗಿ ಹೇಳುವುದಕ್ಕೆ ಎಲ್ಲಾ ಸದಸ್ಯರಿಗೆ ಅವಕಾಶ ಸಿಗುತ್ತದೆ. ಸಾಧ್ಯವಾದ ಮಟ್ಟಿಗೆ ಎಷ್ಟು ಜನರಿಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿಕ್ಕೆ ಅವಕಾಶ ಸಿಗುತ್ತದೆ ಅವರೂ ಸಹ ಸಾಕಷ್ಟು ಬೆಳಕು ಚೆಲ್ಲಬಹುದು. ಈ ವಿಷಯದಲ್ಲಿ ನಾವು ಉತ್ತರ ಕೊಡತಕ್ಕ ಕಾಲದಲ್ಲಿ ಒಂದೊಂದು ಆಪಾದನೆಗಳಿಗೆ ಒಂದೊಂದು ಗಲಭೆಗಳಿಗೆ, ಒಂದೊಂದು ಘಟನೆಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ವಿವರವಾದ ಅಂಕಿಅಂಶಗಳನ್ನು ತರಿಸಿ, ಸರ್ಕಾರದ ವತಿಯಿಂದ ಏನು ಕ್ರಮತೆಗೆದುಕೊಳ್ಳಲಾಗಿದೆ. ಆ ಎಲ್ಲಾ ವಿಷಯಗಳನ್ನು ಸಭೆಯ ಮುಂದಿಡಲಿಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಒಂದು ವೇಳೆ ಈ ವಿಷಯದ ಬಗ್ಗೆ ಸಪರೇಟಾಗಿ ಚರ್ಚೆಗೆ ತೆಗೆದುಕೊಳ್ಳುತ್ತೇವೆಂದರೆ ನಮ್ಮದೇನೂ ಅಭ್ಯಂತರವಿಲ್ಲ. ಈಗಲೇ ಆಗಬೇಕೆಂದು ನಮ್ಮದೇನು ಇಲ್ಲ. ನಾಳೆ ತಾವು ಸಮಯವನ್ನು ನಿಗದಿ ಮಾಡಿ ಚರ್ಚೆಗೆ ಅವಕಾಶ ಕೊಟ್ಟರೆ ಬೇಕಾದರೆ ಆಮೇಲೆ ಚರ್ಚೆ ಮಾಡೋಣ. ಇಲ್ಲ, ರಾಜ್ಯಪಾಲರ ಭಾಷಣದ ಮೇಲೆ ಮಾತಾನಾಡುವಾಗ ಹೇಳಿ ಅಂದರೆ, ಏನಾಗುತ್ತದೆಂದರೆ ಈ ವಿಷಯದ ಗಾಂಭೀರ್ಯತೆ ಉಳಿಯುವುದಿಲ್ಲ. ಇದಕ್ಕೆ ತಾವು ಬೇರೆ ಟೈಮ್ ಫಿಕ್ಸ್ ಮಾಡಿ ಸ್ಪೆಷಲ್ ಟೈಮ್ ಕೊಡುವುದಾದರೆ ಸಂತೋಷ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನಾವು ಯಾರ ಮೇಲೂ ಅಲಿಗೇಷನ್ ಮಾಡಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ಮುಂದೆ ಬರತಕ್ಕ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆಗಳು ಏನು ಬರುತ್ತವೆ. ಆಗ ಜನ ನಿರ್ಭೀತಿಯಿಂದ ಯಾವುದೇ ಪಕ್ಷಕ್ಕೆ ಮತದಾನ ಮಾಡತಕ್ಕ ಧೈರ್ಯ ಬರಬೇಕು. ಇಲ್ಲದಿದ್ದರೆ ಇವತ್ತಿನ ದಿವಸ ನಮಗೆ ಮತ ಸಿಗಲಿಲ್ಲವೆಂದು ಇನ್ನೊಬ್ಬರು ಹೋಗಿ ಹೊಡೆಯುವುದು, ಲೂಟಿ ಮಾಡುವುದು ಆಮೇಲೆ ಅವರ ಮೇಲೆ ಕ್ರಿಮಿನಲ್ ಕೇಸು ಹಾಕುವುದು ಅವು ಆಗಬಾರದು.

ಆ ದೃಷ್ಟಿಯಿಂದ ತೆಗೆದುಕೊಂಡಿದ್ದೇವೆಯೇ ವಿನಹ, ಏನೋ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾರೆ ಅವರ ಮುಖಕ್ಕೆ ಮಸಿ ಬಳಿಯುವ ದೃಷ್ಟಿಯಿಂದ ಆ ಕಡೆ ಹೀಗೆ ಆಗಿದೆ. ಈ ಕಡೆ ಹೀಗೆ ಆಗಿದೆಯೆಂದು ಹೇಳತಕ್ಕದ್ದು ಅಲ್ಲ. ಇದಕ್ಕೆ ಯಾರು ಕುಮ್ಮಕ್ಕು ಕೊಡುತ್ತಿದ್ದಾರೆ. ಏಕೆ ಈ ರೀತಿಯಾಗುತ್ತಿದೆ. ಇದರ ಪರಿಣಾಮ ನಾಳೆ ಬರತಕ್ಕ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯ ಮೇಲೆ ಏನಾಗುತ್ತದೆ? ಮತದಾರರ ಮುಕ್ತವಾಗಿ ಮತದಾನ ಮಾಡಬಹುದೆ? ಇದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ? ಬೇಕಾದರೆ ಜುಡಿಸಿಯಲ್ ಪ್ರೋಬ್‌ಗೆ ಆರ್ಡರ್ ಮಾಡಿ. ಸುಮಾರು 8–9 ಕೊಲೆಗಳಾಗಿವೆ. ಇದಕ್ಕೆ ಕಾರಣ ಏನೆಂದು ಕಂಡುಹಿಡಿಯಿರಿ. ನಾವು ಅದಕ್ಕೂ ತಯಾರಾಗಿದ್ದೇವೆ. ಈ ಎಲ್ಲಾ ಘಟನೆಗಳನ್ನು ಹೈಕೋರ್ಟ್ ರಿಟೈರ್ಡ್ ಜಡ್ಜ್ ಆಗಲೀ ಅಥವಾ ತಾವು ಯಾರನ್ನಾದರೂ ನೇಮಿಸಿ ಅವರು ಒಂದು ರಿಪೋರ್ಟ್ ಕೊಡಲಿಕ್ಕೆ ವ್ಯವಸ್ಥೆ ಮಾಡಿ. ಈ ಸದನದಲ್ಲಿ ಅನೇಕ ಸಲ ಮಾಡಿದ್ದೀರಿ. ಇದೇನು ಸಣ್ಣದಲ್ಲ, ಕೇವಲ 10–15 ದಿವಸಗಳಲ್ಲಿ 9 ಕೊಲೆಗಳಾಗಿವೆ. ಚುನಾವಣೆ ನಡೆದ ನಂತರ ಕೊಲೆಗಳಾಗಿವೆ. ಸ್ಪೆಷಲ್ ಆಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ನಾವು ಅದರ ಬಗ್ಗೆ ಚರ್ಚೆ ಮಾಡುತ್ತೇವೆ. ಬೇಕಾದರೆ ಜುಡಿಸಿಯಲ್ ಪ್ರೋಬ್‌ಗೆ ಆರ್ಡರ್ ಮಾಡಿ, ಅದಕ್ಕೆ ನಾವು ಒಪ್ಪುತ್ತೇವೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿ):– ಮಾನ್ಯ ಅಧ್ಯಕ್ಷರೆ, ಕೊಲೆಯ ಬಗ್ಗೆ ತನಿಖೆ ಮಾಡಲಿಕ್ಕೆ ಜುಡಿಸಿಯಲ್ ಪ್ರೋಬ್ ಯಾರೂ ಮಾಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಕೊಲೆಯ ಜೊತೆಗೆ ಬೇರೆ ಬೇರೆ ಘಟನೆಗಳಿವೆ.

ಶ್ರೀ ಜೆ.ಹೆಚ್. ಪಟೇಲ್:– ಮಾನ್ಯ ಅಧ್ಯಕ್ಷರೆ, ಈಗ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ನಿಲುವಳಿ ಸೂಚನೆಯಲ್ಲಿ ತಮ್ಮ ಅನುಮತಿಗೋಸ್ಕರ ಅವರು ಏನೇನು ಹೇಳಬೇಕೋ ಅದನ್ನೆಲ್ಲ ಹೇಳಿದ್ದಾರೆ. ತಮ್ಮ ಗಮನಕ್ಕೆ ತರುವುದೇನೆಂದರೆ, ಇದರ ಬಗ್ಗೆ ಹೀಗೆ ಚರ್ಚೆ ಮಾಡುತ್ತಾ ಹೋದರೆ ಹೇಗೆ? ಇವರ ವಿಷಯ ಏನಿದೆ, ಅದರಂತೆ, ನಮ್ಮ ಇಚ್ಛೆಯೂ ಸಹ ಸಮಾಜದಲ್ಲಿ ಹಿಂಸೆ ಇರಬಾರದು, ದುರ್ಬಲವರ್ಗದವರಿಗೆ ರಕ್ಷಣೆ ಇರಬೇಕು. ಸರ್ಕಾರ ಏನೂ ಮಾಡದಿದ್ದರೂ ಜನರ ಆಸ್ತಿಪಾಸ್ತಿಯನ್ನು ರಕ್ಷಣೆ ಮಾಡಬೇಕೆಂದು ತಮ್ಮ ಅಭಿಪ್ರಾಯ ಕೂಡ ಇದೆ. ನಾವು ಅದಕ್ಕೆ ಬದ್ಧರಾಗಿರತಕ್ಕವರು. ಈಗ ನೀವು ಮಾಡಿದ್ದೀರಿ. ನಾವು ಮಾಡುವುದು ಸರಿಯೆಂದು ನಾವು ಎಂದೂ ಹೇಳಲಿಲ್ಲ. ಮಳೆ ಧಾರಾಕಾರವಾಗಿ ಸುರಿದ ಮೇಲೆ, ಮರದ ಕೆಳಗೆ ನಿಂತರೆ ಮಳೆಯ ಹನಿಗಳು ಉದುರುತ್ತಿರುತ್ತವೆ. (ನಗು) ಮಾನ್ಯ ಖರ್ಗೆಯವರ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಸಮಾಜದಲ್ಲಿರತಕ್ಕ ದುರ್ಬಲರು ಭೀತಿಯಿಂದ ಇರಬಾರದು. ಯಾವುದೇ ಸರ್ಕಾರವಿರಲಿ ಅವರ ರಕ್ಷಣೆಯನ್ನು ಮಾಡಬೇಕು. ತಾವು ಘಟನೆಗಳ ಬಗ್ಗೆ ಹೇಳಿದ್ದೀರಿ. ಸಭಾನಾಯಕರು ಹೇಳಿದ್ದಾರೆ. ಘಟನೆ ಎಲ್ಲಿ ನಡೆದಿದೆ. ಯಾರು ಮಾಡಿದ್ದಾರೆ ನಮ್ಮವರೇ ಮಾಡಿದ್ದರೂ ನಾವು ಶಿಕ್ಷೆ ಮಾಡುತ್ತೇವೆ. ಯಾವುದೇ ಕಾರಣದಿಂದ ಕಾನೂನನ್ನು ಮೀರಿ, ಕಾನೂನನ್ನು ಮುರಿಯತಕ್ಕಂತ ಸರ್ಕಾರದ ಜನರೇ ಯಾರು ಕಾನೂನನ್ನು ಮಾಡುತ್ತಾರೋ, ಅವರೇ ಕಾನೂನನ್ನು ಮುರಿಯತಕ್ಕಂಥ ಸಂಪ್ರದಾಯವನ್ನು ಏನು ತಂದಿದ್ದೀರಿ. ಅದನ್ನು ನಾವು ನಿಲ್ಲಿಸುತ್ತೇವೆ. ಕಾನೂನನ್ನು ಎತ್ತಿಹಿಡಿಯುತ್ತೇವೆ, ತಪ್ಪಿದ್ದರೆ ಶಿಕ್ಷೆ ಮಾಡುತ್ತೇವೆ. ಅದಕ್ಕೆ ಈ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಆ ಊರಿನಲ್ಲಿ ಹೀಗೆ ಆಯಿತು. ಈ ಊರಿನಲ್ಲಿ ಹಾಗೆ ಆಯಿತು. ಎಂದರೆ, ನಾನು ಮಾನ್ಯ ಖರ್ಗೆಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತಾವು ಈ ರಾಜ್ಯಪಾಲರ ಭಾಷಣದ ಮೇಲೆ, ಇನ್ನೊಂದು. ಹಿಂಸೆ ಯಾವ ಸಮಾಜದಲ್ಲಿಇರುತ್ತದೆ ಎಂದರೆ, ಅಧ್ಯಕ್ಷರೇ, ಬಡತನ, ನಿರುದ್ಯೋಗ, ಸಾಮಾಜಿಕ

ಏರುಪೇರುಗಳು ಇರುತ್ತರೆ ಅಲ್ಲಿ ಹಿಂಸೆ ಇದ್ದೇ ಇರುತ್ತದೆ. ಯಾರದ್ದೇ ಸರ್ಕಾರ ಇರಲಿ. ಅದನ್ನು ಅಂದರೆ ಸಮಾಜವನ್ನು ಮೂಲಭೂತ ರೋಗಗಳಿಂದ ಬಿಡಿಸುವುದು ಹೇಗೆ ದು ಯೋಚನೆ ಮಾಡಿ, ಚರ್ಚೆಮಾಡಿ, ಅನುಭವಸ್ತರುಗಳು ಹತ್ತುಹತ್ತು ವರ್ಷ, ಇಪ್ಪತ್ತು ಇಪ್ಪತ್ತು ವರ್ಷ ಮಂತ್ರಿಗಳಾಗಿರುವಾರು, ಏನು ಮಾಡಬೇಕು ? ನಮ್ಮ ಸರ್ಕಾರ ಏನು ಮಾಡಬೇಕು ಎಂದು ಅವರು ಸಲಹೆ ಕೊಡಲಿ. ಸಮಾಜದನ್ನು ಲಬಾಢ್ಗೊಳಿಸುವುದಕ್ಕೆ, ಅನ್ಯಾಯರನ್ನು ತೊಲಗಿಸುವುದಕ್ಕೆ ಆರ್ಥಿಕವಾಗಿ ನಾವು ಏನು ಮಾಡಬೇಕು, ಭೂರಹಿತರಿಗೆ ಏನು ಮಾಡಬೇಕು, ಹಿಂದುಳಿದ ವರ್ಗದವರಿಗೆ ಏನು ಮಾಡಬೇಕು, ಹಳ್ಳಿಗಾಡಿನ ಜನರಿಗೆ ಏನು ಮಾಡಬೇಕು ? ವಿಕೇಂದ್ರಿಕರಣ ತಂದಿದ್ದೇವು. ಅದನ್ ಈಗ ಮತ್ತೆ ತರಬೇಕೇ ಬೇಡವೇ ಇಂತಹವೆಲ್ಲ ಸಲಹೆ ಕೊಡಿ. ಹಲವಾರು ವಿಷಯಗಳು ಇವೆ, ಬಹಳ ಮುಖ್ಯವಾದ ವಿಷಯಗಳಿವೆ. ಅದನ್ನು ಬಿಟ್ಟು ಜ್ಯುಡಿಶಯಲ್ ಪ್ರೊಬ್ ಕೇಳುತ್ತೀರಿ. ಅವರಂತಹ ಅನುಭವಿಗಳಿಗೆ ಇದು ಅಲ್ಲ. ಆದ್ದರಿಂದ ಈ ನಿಲುವಳಿ ಸೂಚನೆಯನ್ನು ಹಿಂತೆಗೆದುಕೊಂಡು ರಾಜ್ಯಪಾಲರ ಭಾಷಣ ಮೇಲೆ ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಎನ್. ನಂಜೇಗೌಡ: ಅಲ್ಲ, ವಿಕೇಂದ್ರಿಕರಣ ಹೇಳಿದಿರಲ್ಲ, ಅದು ಹಿಂಸಾಚಾರದ ವಿಕೇಂದ್ರೀಕರಣ ಆಗಬಾರದು.

ಶ್ರೀ ಎಂ. ವೀರಪ್ಪ ಮೊಯಿಲಿ: ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಉಪಮುಖ್ಯಮಂತ್ರಿಯವರು ಬಹಳ ಸ್ವಾರಸ್ಯವಾಗಿ ಮಾತನಾಡಿದರು. ಇಲ್ಲಿ ಸ್ವಾರಸ್ಯದ ಪ್ರಶ್ನೆ ಅಲ್ಲ. ಇಲ್ಲಿರುವುದು ಗಂಭೀರತೆಯ ಪ್ರಶ್ನೆ. ಬಹುಶಃ ತಾವು ಇದನ್ನು ಗಮನಕೊಟ್ಟು ಕೇಳಿದ್ದೀರೋ ಇಲ್ಲವೋ. ಏಕೆಂದರೆ ಇಲ್ಲಿ ಒಂಬತ್ತು ಕೊಲೆಗಳು ಆಗಿವೆ ಎಂದು ಹೇಳುತ್ತಿದ್ದರು. ಅದೂ ಕೂಡ ರಾಜಕೀಯ ಕೊಲೆಗಳು ಆಗಿವೆ. ಇದೇನು ಮಳೆಬಿತ್ತು, ಆ ಮಳೆ ಹೋದ ಮೇಲೆ ಹನಿ ಬೀಳುತ್ತದೆ ಅಂತ ಏನು ಹೇಳಿದಿರಿ ದಯಮಾಡಿ ದಂತಕಥೆಯನ್ನು ಇಲ್ಲಿ ತರಬೇಡಿ. ಇದು ಗಂಭೀರವಾದಂಥ ಒಂಬತ್ತು ರಾಜಕೀಯ ಕೊಲೆಗಳು ಅದಂಥ ಪ್ರಸಂಗ. ಚುನಾವಣೆಯಾಗಿದೆ. ಆ ಚುನಾವಣೆ ಆದಂಥ ಸಂದರ್ಭದಲ್ಲಿ ಆಗಲಿ, ಯಾವುದೇ ಕೊಲೆಪ್ರಕರಣಗಳು ಆಗಲಿಲ್ಲ. ರಾಜಕೀಯ ಕೊಲೆ ಅಥವಾ ಸಂಘರ್ಷಣೆಗೆ ಅವಕಾಶ ಕೊಡದೆ ಶಾಂತವಿಧಾನದಿಂದ ಚುನಾವಣೆ ಇವತ್ತು ನಡೆದಿದೆ. ಇದರ ಬಗ್ಗೆ ಶೇಷನ್ ಅವರು ಕೂಡ ಹೇಳಿದ್ದಾರೆ. ಚುನಾವಣೆಯಾದ ಮೇಲೆ, ಕೌಂಟಿಂಗ್ ಆದಮೇಲೆ, ಇವತ್ತು ರಾಜಕೀಯವಾಗಿ ಒಂಭತ್ತು ಕೊಲೆಗಳು ಆಗುತ್ತಾ ಇರುವಾಗ, ತಾವು ಕಥೆ ಹೇಳುತ್ತ ಹೋದರೆ, ಬಹುಶಃ ಅದು ತಮಗೆ ಶೋಭೆ ಬರುವುದಿದ್ದರೆ ಹೇಳಿ. ಶಬ್ದಾಲಂಕಾರ ಇದೆ ಎಂದು ಹೇಳಿ, ಎಲ್ಲಿ ಉಪಯೋಗ ಮಾಡಬೇಕು ಎಂದು ತಾವು ತಿಳಿದುಕೊಂಡು ಈ ಸದನದ ಗಾಂಭಿರ್ಯತೆಯನ್ನು ಉಳಿಸಿದರೆ ಬಹಳ ಸಂತೋಷ. ಆದ್ದರಿಂದ ನೀವು ದಯವಿಟ್ಟು

ಶ್ರೀ ಜೆ.ಎಚ್. ಪಟೇಲ್: ಶಬ್ದಗಲನ್ನು ಉಪಯೋಗಿಸುವಾಗ ಅರ್ಥ ಇರಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ: ನಾನು ಈಲ್ಡ್ ಆಗಿಲ್ಲ.

ಶ್ರೀ ಜೆಎಚ್. ಪಟೇಲ್: ಅರ್ಥಹಿಡಿದು ಮಾತನಾಡಬೇಕು.

ಶ್ರೀ ಎಂ. ವೀರಪ್ಪ ಮೋಯಿಲಿ: ಆದರೆ ಇದನ್ನು ಬಹಳ ನಗೆಯಿಂದ ತೇಲಿಸಿ ಒಂಭತ್ತು ರಾಜಕೀಯ ಕೊಲೆಗಳು ಆಯಿತು ಎಂದು ಹೇಳಿ ಇವತ್ತು ಮೇಜು ಕುಟ್ಟತಕ್ಕಂಥ ಒಂದು ಪ್ರಸಂಗ ತಾವು ಮಾಡುವುದಿದ್ದರೆ ಹಾಗಾದರೆ ತಾವು ಇದಕ್ಕೆ ಉತ್ತೇಜನ ಮಾಡುತ್ತಿದ್ದೀರಿ ಎಂದು ನಾವು ಹೇಳಬೇಳಬೇಕಾಗುತ್ತದೆ. ಸನ್ಮಾನ್ಯ ಮುಖ್ಯಂತ್ರಿಗಳು ಹೇಳಿದರು. ನಾವು ವಿವರ ತರಿಸಬೇಕು ಎಂದರೆ

ಪುನಃ ಕೊಲೆಗಳು ಆಗಬೇಕು ಎಂದು ತಮ್ಮ ಆಪೇಕ್ಷೆ ಇದ್ದರೆ ಅದನ್ನಾದರೂ ಹೇಳಿ ಆ ಪ್ರಶ್ನೆ ಪ್ರತ್ಯೇಕ. ಆ ಅಪೇಕ್ಷೆ ತಮಗೆ ಇಲ್ಲ ಅಂತ ಹೇಳಿ ನನಗೆ ಗೊತ್ತಿದೆ. ಅದಕ್ಕೆ ತಾವು ಪ್ರಾಮಾಣಿಕವಾಗಿ....

(ಗೊಂದಲ)

ಶ್ರೀ ಶಂಕರಲಿಂಗೇಗೌಡ: ಮೊಯಿಲಿಯವರೇ, ದಯಮಾಡಿ ಕೇಳಿ. ನಿಮ್ಮ ಸಂಸ್ಕೃತಿ ಹಿಂದೆ ಇತ್ತು. ಆದರೆ ಸಂಸ್ಕೃತಿ ಅಲ್ಲಿ ಇರಲಿಲ್ಲ ಶ್ರೀ ದೇವೇಗೌಡರು ಮುನ್ನಾದಿನ ಮಾಡಿದಂತ ರೀತಿ ಈ ಸದನನಕ್ಕೆ ನೈತಿಕ ಮತ್ತು ಮತ್ತು ಗೌರವ ತರತಕ್ಕದ್ದಲ್ಲ ನಿಮ್ಮ ಸಂಸ್ಕೃತಿಯಲ್ಲೂ ಅದು ಇತು. ಆದರೆ ಆ ಸಂಸ್ಕೃತಿ ಆವತ್ತು ಇರಲಿಲ್ಲ. ಅದು ಮುಂದೆ ಆಗಬಾರದು ಎನ್ನತಕ್ಕಂಥಾದ್ದನ್ನು ನಾವು ಹೇಳುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ: ನಮ್ಮ ಸಂಸ್ಕೃತಿ ಏನು, ನಿಮ್ಮ ಸಂಸ್ಕೃತಿ ಏನು ಎಂದು ಮುಂದೆ ಗೊತ್ತಾಗುತ್ತದೆ. ಹಿಂದೆಯೂ ಕೂಡ ಗೊತ್ತಾಗಿದೆ. ಈ ದೇಶದಲ್ಲೇ ಗೊತ್ತಾಗಿ. ನಿಮ್ಮ ಸಂಸ್ಕೃತಿ ಏನೂ ಎಂದು ಸುಮ್ಮನೆ ಮಾತನಾಡಬೇಡಿ. ಆ ವಿಷಯ ಮಾತನಾಡಬೇಡಿ. ಈ ದೇಶದಲ್ಲಿ ರಕ್ತದ ಪ್ರವಾಹವನ್ನು ಹರಿಸಿದಂಥ ಸಂಸ್ಕೃತಿ ಯಾವ ಪಕ್ಷದ್ದು ಎಂದು ಹೇಳಿ ಈ ದೇಶಕ್ಕೇ ಗೊತ್ತಾಗಿದೆ. ಆದ್ದರಿಂದ ದಯಮಾಡಿ ಸ್ವಲ್ಪ ತಿಳಿದುಕೊಳ್ಳಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ: ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಇದರ ಬಗ್ಗೆ ನಾವು ವಿವರ ತರಿಸಬೇಕು ಎಂದು ಹೇಳಿದರು. ಒಪ್ಪುತ್ತೇವೆ. ವಿವರ ತರಿಸಿ. ಏಕೆಂದರೆ ಗೂಬೆ ಕೂರಿಸುವಂಥ ಪ್ರಸಂಗವನ್ನು ನಾವು ಹೇಳುವುದಿಲ್ಲ. ಏನೆಂದರೆ ಮೊನ್ನೆಮೊನ್ನೆ ತಾನೇ ತಾವು ಅಧಿಕಾರವನ್ನು ವಹಿಸಿಕೊಂಡಿದ್ದೀರಿ. ತಾವು ಇದನ್ನು ವಿಚಾರ ಮಾಡಬೇಕಾಗುತ್ತದೆ. ನೋಡಬೇಕಾಗುತ್ತದೆ. ಈ ಬಗ್ಗೆ ಕೂಡಲೇ ನಿಮಗೆ ಟೀಕೆ ಮಾಡಬೇಕು ಎನ್ನತಕ್ಕಂಥ ಪ್ರವೃತ್ತಿಯನ್ನು ನಾವು ಇಟ್ಟುಕೊಂಡಿಲ್ಲ.

ವಿವರಗಳನ್ನು ತರಿಸಿ ನಾಳೆ ನಾಡದ್ದು ಸಮಯವನ್ನು ನಿಗದಿಪಡಿಸಿ, ಚರ್ಚೆಮಾಡಿ. ಆದರೆ ಇದನ್ನು ಹಾರಿಸಿಕೊಂಡ ಹೋಗತಕ್ಕಂಥ ಪ್ರವೃತ್ತಿ ಮಾತ್ರ ಮಾಡಿದರೆ ನಾವು ಕೂಡ ಚರ್ಚೆ ಮಾಡಬೇಕಾಗುತ್ತದೆ. ನಾವು ತಮ್ಮನ್ನು ತರಾಟೆಗೆ ಕೂಡ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಅದನ್ನು ನಾವು ಮಾಡುವುದಿಲ್ಲ. But, at the some time don't lightly look into these things. ಮಳೆಬಂತು, ಹನಿಬಿತ್ತು ಎಂದರೆ ಹನಿಯಲ್ಲಿ ಒಂಭತ್ತು ಕೊಲೆಯಾದರೆ, ನಿಮ್ಮಲ್ಲಿ ಮಳೆ ಬಂದರೆ ಎಷ್ಟು ಕೊಲೆಯಾಗಬಹುದು ಎಂದು ತಾವು ಆಲೋಚನೆ ಮಾಡಿ. ತಾವು ದಯಮಾಡಿ ವಿಚಾರವನ್ನು ಗಂಭೀರವಾಗಿ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ರಮಾನಾಥರೈ: ಅಧ್ಯಕ್ಷರೇ, ಇಂತಹ ಘಟನೆ ನಡೆದಿರುವಾಗ,ಬಹಳ ಗಂಭೀರವಾಗಿ ಇದನ್ನು ಪರಿಗಣಿಸಬೇಕಾಗುತ್ತದೆ. ಇದನ್ನು ಹಾರಿಕೆಯಿಂದ ಮಾತನಾಡತಕ್ಕಂಥಾದ್ದು ಆಗಬಾರದು. ಈ ಸಭೆ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಶ್ರೀ ಎಂ. ನಾರಾಯಣ್: ಈ ಹೇಳಿಕೆಯನ್ನು ನಾವು ಬಹಳ ಕಟುವಾಗಿ ಖಂಡಿಸಬೇಕಾಗುತ್ತದೆ. ಜನಭಯಭೀತರಾಗಿದ್ದಾರೆ. ಜನರ ಜೀವನ್ಮರಣದ ಪ್ರಶ್ನೆ ಇದೆ. ಸರ್ಕಾರ ನಮ್ಮನ್ನು ರಕ್ಷಿಸಬೇಕಾಗಿದೆ ಎಂದು ನಾವು ನಿಲುವಳಿ ಸೂಚನೆ ಮೂಲಕ ಗಾಂಭೀರ್ಯತೆಯನ್ನು ಪ್ರದರ್ಶಿಸುವುದಕ್ಕೆ ಹೋದರೆ, ಇಷ್ಟೊಂದು ಗಂಭೀರ ಸಮಸ್ಯೆಯನ್ನು ಬಹಳ ಲಘುವಾಗಿ ಪರಿಗಣಿಸತಕ್ಕಂಥದ್ದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ನಾರಾಯಣರವರೇ ತಾವು ಸಹ ಎರಡನೆಯ ಅವಧಿಗೆ ಇಲ್ಲಿಗೆ ಬಂದಿದ್ದೀರಿ. ಅಷ್ಟು ಸ್ಪೀಡ್‌ನಲ್ಲಿ ಮಾತನಾಡಿದರೆ ಹೇಗೆ?

ಶ್ರೀ ಎಂ. ನಾರಾಯಣ: ಇಷ್ಟು ಲಘುವಾಗಿ ಮಾತನಾಡಿದರೆ ನಾವು ಅದನ್ನು ಖಂಡಿಸಬೇಕಾಗುತ್ತದೆ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ದೇವೇಗೌಡ: ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಯಾರೂ ಭಾವೋದ್ರೇಕಗೊಳ್ಳಬೇಕಾದ ಅವಶ್ಯಕತೆ ಇಲ್ಲ. ಈ ಸದನದ ಹಿರಿಯ ಸದಸ್ಯರು ಇರಲಿ, ಅಥವಾ ಹೊಸದಾಗಿ ಬಂದಿರತಕ್ಕಂಥ ಸನ್ಮಾನ್ಯ ಗೌರವಾನ್ವಿತ ಯಾರೇ ಸದಸ್ಯರಿರಲಿ, ಅವರ ಕ್ಷೇತ್ರದಲ್ಲಿ ನಡೆದಿರತಕ್ಕಂಥ ಘಟನೆಗಳ ಬಗ್ಗೆ ಸ್ವಾಭಾವಿಕವಾಗಿ ಆ ವಿಷಯವನ್ನು ಈ ವೇದಿಕೆಯಲ್ಲೇ ಎತ್ತಬೇಕಾಗುತ್ತದೆ. ನಾನು ಆ ಬಗ್ಗೆ ಯಾವ ಆಕ್ಷೇಪಣೆಯನ್ನು ಕೂಡ ತೆಗೆಯುವುದಕ್ಕೆ ಸಿದ್ಧನಿಲ್ಲ. ಆದರೆ ನಾನು ಒಂದು ಮಾತನ್ನು ಹೇಳಿದ್ದೆ. ಮಾನ್ಯ ಮಿತ್ರರಾಂದಂಥ ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತು ನಾವು ವಿರೋದಪಕ್ಷದಲ್ಲಿ ಒಟ್ಟಿಗೆ ಕುಳಿತುಕೊಂಡು ಕೆಲಸ ಮಾಡಿದ್ದೇವೆ. ಇವತ್ ರಾಜ್ಯಪಾಲರ ಭಾಷಣ ಇಲ್ಲದೇ ಇದ್ದಿದ್ದರೆ, ತಾವು ಹೇಳಿದಂಥ ಮಾತನ್ನು ನಾನು ಒಪ್ಪಿಕೊಳ್ಳುತ್ತಿದೆ. ಭಾಷಣದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು, ನೀವು ಎಲ್ಲಾ ಸೇರಿ ನಿಗದಿಮಾಡಿದ್ದೇವೆ. ಕಾನೂನಿನ ಯಾವುದೇ ಕುಸಿದ ಇದ್ದರೂ ಅದನ್ನು ಚರ್ಚೆ ಮಾಡಲಿಕ್ಕೆ ಸಾಕಷ್ಟು ಅವಕಾಶ ಇದೆ. ನಾನು ನಿನ್ನೆಯೂ ಕೂಡ ಹೇಳಿದ್ದೇನೆ. ರಾತ್ರಿ ಹತ್ತು ಗಂಟೆವರೆಗೆ ಕೂಡಲೆಕ್ಕ ಈ ಸರ್ಕಾರ ಸಿದ್ಧವಿದೆ. ಈ ಸದನಕ್ಕೆ ಬಂದಿರುರ ಯಾವ ಸದಸ್ಯರಿಗೂ ಕೂಡ ಮಾತನಾಡಲಿಕ್ಕೆ ನಮಗೆ ಅವಕಾಶ ಸಿಗಲಿಲ್ಲ ಎನ್ನುವಂಥ ಮನೋವೇದನೆ ಬೇಕಾಗಿಲ್ಲ. ನಾನು ಈ ಕಡೆಯಿಂದ ಹೇಳುತ್ತಿದ್ದೇನೆ. ರಾತ್ರಿ ಹತ್ತು ಗಂಟೆಗಲೀ ಕುಳಿತು ಕೆಲಸ ಮಾಡಲಿಕ್ಕೆ ಸಿದ್ಧನಿದ್ದೇನೆ. ಗೌರವಾನ್ವಿತ ಸದಸ್ಯರಾದ ಮಾನ್ಯ ನಂಜೇಗೌಡರುನಿನ್ನ ಬಿಸನೆಸ್ ಅಡ್ವೈಸರಿ ಕಮಿಟಿಯಲ್ಲಿ ರಾತ್ರಿ ಎರಡು–ಮೂರು ಗಂಟೆವರೆಗೆ ಲೋಕಸಭೆ ನಡೆದಿದೆ ಎಂದುದ ಹೇಲಿದರು. ಈ ಮೂರು ದಿರಸಗಳ ಚರ್ಚೆಯಲ್ಲಿ ಯಾವುದೇ ಕ್ಷೇತ್ರದಲ್ಲಿ ಇವತ್ತು ಸರ್ಕಾರದ ವೈಫಲ್ಯತೆಯಿಂದ ಈ ಘಟನೆ ನಡದಿದೆ ಎಂದು ಹೇಳುವುದಕ್ಕೆ ನಿಮಗೆ ಅಧಿಕಾರ ಇದೆ. ಆದರೆ ನಾವು ಏನು ಕ್ರಮ ತೆಗೆದುಕೊಂಡಿದ್ದೇರೆ ಎಂದು ಹೇಳುವ ಒಂದು ಅವಕಾಶ ಕೂಡ ನಮಗೆ ಇದೆ. ಆದರೆ ಇಷ್ಟೇ ನಾನು ಈ ಸಂದರ್ಭದಲ್ಲಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳುವುದಕ್ಕೆ ಪ್ರತ್ಯೇಕ ಚರ್ಚೆ ಮಾಡಿದರೆ ಅದು ಬರುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ: ನಿಲುವಳಿ ಸೂಚನೆಗೆ ತಾವು ಅವಖಾಶ ಕೊಡಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರೆ ಮನವೊಲಿಸಲಿಕ್ಕೋಸರವಾಗಿ ನೀವು ಪೂರ್ವಭಾವಿಯಾಗಿ ಕೆಲವು ಮಾತುಗಳನ್ನು ಆಡಿದ್ದೀರಿ; ಆದರೆ ಇನ್ನೂ ವಿಸ್ತಾರವಾಗಿ , ಚಿನ್ನ ಹೋಯಿತು, ಬೆಳ್ಳಿ ಹೋಯಿತು, ವರಜ್ರ ಹೋಯಿತು ಹೀಗೆ ಇನ್ನೂ ಹಲವಾರು ವಇಷಯಗಳ ಬಗ್ಗೆ ನೀವು ಬೆಳಕು ಚೆಲ್ಲಬೇಕಾಗುತ್ತದೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಇರುವಾಗ, ನೀವು ಕ್ರಿಮಿನಲ್ ಕೇಸ್, ನಂಬರ್ ಇದೆಲ್ಲ ಹೇಳಿದಿರಲ್ಲ, ಆ ಒಂದು ಮೊಕದ್ದಮೆ ಬಗ್ಗೆ ನಿಮ್ಮಲ್ಲಿ ಇನ್ನೂ ಮಾಹಿತಿ ಇದ್ದರೆ, ಆ ಎಲ್ಲಾ ಮಾಹಿತಿಯನ್ನು ಈಗ ಮಧ್ಯಾಹ್ನ ಒಂದುಗಂಟೆಗೆ ಪ್ರಾರಂಭವಾಗುತ್ತದೆ. ಆಗ ಹೇಳಿ, ನಮಗೂ ಸಾಕಷ್ಟು ಅವಕಾಶ ಸಿಗುತ್ತದೆ. ಅಧಿಕಾರಿಗಳು ಏನಾದರೂ ಎಡವಿದ್ದಾರೋ, ಎಲ್ಲಿಯಾದರೂ ದಾರಿ ತಪ್ಪಿದ್ದಾರೋ ನಾನು ಯಾರಿಗೂ ದೋಷ ಕೊಡುತ್ತಿಲ್ಲ. ಅಧಿಕಾರಿಗಳ್ನು ಇನ್ನು ಹಾಗಿಲ್ಲ ನಾನು ನಾಳೆ ಉತ್ತರ ಕೊಡುತ್ತೇನೆ. ಶ್ರೀ ಕೋದಂಡರಾಮಯ್ಯನವರನ್ನು ಬಿಟ್ಟರೆ ಯಾವ ಸರ್ಕಲ್ ಇನ್‌ಸ್ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್, ಯಾರನ್ನೂ ಚೇಂಜ್ ಮಾಡಿಲ್ಲ. ಕಾನ್‌ಸ್ಟೇಬಲ್‌ನ್ನೂ ಚೇಂಜ್ ಮಾಡಿಲ್ಲ. ಯಾವ ವ್ಯವಸ್ಥೆ ಇತ್ತೋ ಅದೇ ವ್ಯವ್ಸಥೆ ಅಲ್ಲಿದೆ. ಆ ವ್ಯವಸ್ಥೆ ಈ ರಾಜ್ಯದಲ್ಲಿ ಸರಿಯಾಗಿ ನಡೆದುಕೊಂಡಿಲ್ಲ. ಎನ್ನುವುದಾದರೆ, ಕ್ರಮ

ತೆಗೆದುಕೊಳ್ಳುವುದಕ್ಕೆ ಹಿಂದೆಮುಂದೆ ನೋಡಬೇಕಾದ ಅವಶ್ಯಕತೆ ಇಲ್ಲ. ಆದರೆ ನೀವು ಬೆಳಕು ಚೆಲ್ಲುವುದಕ್ಕೆ ಇನ್ನೂ ಮಾನ್ಯ ಅಧ್ಯಕ್ಷರ ಅನುಮತಿಯನ್ನು ಏನು ಕೇಳಿದ್ದೀರಿ, ಈ ನಿಲುವಳಿ ಸೂಚನೆಗೆ ಸಮ್ಮತಿಕೊಡಿ ಅಂತ ಹೇಳಿ, ಅದರಲ್ಲಿ ಬೆಳಕು ಚೆಲ್ಲುವುದಕ್ಕೆ ಸಾಕಷ್ಟು ಅವಕಾಶ ಇದೆ. ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟಮೇಲೆ ಪ್ರಾರಂಭವಾಗುತ್ತದೆ. ಏನು ಬೆಳಕು ಬೇಕಾದರೂ ಚೆಲ್ಲಿ ಎಲ್ಲೆಲ್ಲಿ ವಜ್ರ ಹೋಗಿದೆ. ವೈಡೂರ್ಯ ಹೋಗಿದೆ ಎಂಬ ಬಗ್ಗೆ ತಾವು ದಯಮಾಡಿ ಹೇಳಿ, ಅದನ್ನು ನಾವು ಸ್ವಾಗತ ಮಾಡುತ್ತೇನೆ ಹೂಗ ಸಂಬಂಧಪಟ್ಟ ಅಧಿಕಾರಿಗಳ ಮೇಲಮೆ ಕ್ರಮತೆಗೆದುಕೊಳ್ಳುವುದ್ಕೆಕೆ ನಾನು ಸಿದ್ಧನಿದ್ದೇನೆ. ಸಂಬಂಧಪಟ್ಟವರು ಯಾವುದೇ ಪಕ್ಷದವನು ಇರಲಿ, ಯಾವುದೇ ವರ್ಗದವನು ಇರಲಿ, ಯಾವುದೇ ಜಾತಿಯವನು ಇರಲಿ ಕ್ರಮ ತೆಗೆದುಕೊಳ್ಳುತ್ತೇವೆ. ಮುಂದೆ ನಡೆಯುವ ಪಂಚಾಯತಿ ಚುನಾವಣೆಯಲ್ಲಿ ಅನಾಹುತವಾಗಿಬಿಡುತ್ತದೆಂದು ತಾವು ಹೇಳಿದ್ದೀರಿ. ನಾಡಿದ್ದು ಬೆಳಿಗ್ಗೆ ಪಂಚಾಯತಿ ಚುನಾವಣಎ ನಡೆಯುವ ಹಾಗಿದ್ದಿದ್ದರೆ ಇವತ್ತೇ ಆ 4 ಜನರನ್ನು ಸಸ್ಪೆಂಡ್ ಮಾಡಿಬಿಡುತ್ತಿದ್ದೆ. ಪಂಚಾಯಿತಿ ಚುನಾವಣೆಗೆ ದಿನ ಇನ್ನೂ ನಿಗದಿಯಾಗಿಲ್ಲ. ನಾಡಿದ್ದು ನಡೆಯುವ ಪಂಚಾಯಿತಿ ಚುನಾವಣೆಯಲ್ಲಿ ಅನಾಹುತವಆಗಿಬಿಡುತ್ತದೆ. ಅಲ್ಲಿ ವೋಟು ಮಾಡುವುದಕ್ಕೆ ಯಾರ್ನೂ ಬಿಡುವುದಿಲ್ಲ ಎನ್ನುರ ಅಪ್ರಹೆನ್‌ಷನ್ ತಮಗೆ ಬೇಡ. ಹಿಂದೆ ನಡೆತ ಎಲ್ಲಾ ಚುನಾವಣೆಯಗಳಲ್ಲಿ ಏನೆಲ್ಲಾ ನಡೆಯಿತೆಂಬ ಬಗ್ಗೆ ನಾವು ಚರ್ಚೆ ಮಾಡುವುದು ಬೇಕಾಗಿಲ್ಲ. ನಾನು ಅದಕ್ಕೆ ಹೋಗುವುದೂ ಇಲ್ಲ. ಈ ಸಾರಿ ಚುನಾವಣೆಯು ನಿಷ್ಪಕ್ಷಪಾತವಾಗಿ ನಡೆದಿದೆ ಎಂದು ಮಾನ್ಯ ಮಾಜಿ ಮುಖ್ಯ ಮಂತ್ರಿಗಳು ಹೇಳಿದರು ಮತ್ತು ಚುನಾವಣಾ ಕಮಿಷನರ್ ಆಗಿರುವ ಶೇಷನ್‌ರವರೂ ಹೇಳಿದ್ದಾರೆ. ಹೌದು ಅದರ ಬಗ್ಗೆ ಕೆಲವು ಬಿಗಿ ಕ್ರಮ ತೆಗೆದುಕೊಂಡಿದ್ದಾರೆ. ಅದ್ನು ನಾವು ಸ್ವಾಗತ ಕೂಡಾ ಮಾಡಿದ್ದೇವೆ. ಅದರ ಬಗ್ಗೆ ನಾನು ಯಾವುದೇ ಆಕ್ಷೇಪ ಎತ್ತಿಲ್ಲ. ಆದರೆ ಈ ಘಟನೆಗಳ ಬ್ಗೆ ಸವಇಸ್ತಾರವಾವಾಗಿ ಬೆಳಕನ್ನು ಚೆಲ್ಲುವಂಥ ಮಾಹಿತಿಗಳು, ಆಧಾರಗಳು, ಸಾಕ್ಷಿಗಳು ಇದ್ದರೆ, ಏಕೆಂದರೆ ತಾವು ಎಫ್.ಐ.ಆರ್. ನಂಬರ್ ಎಲ್ಲಾ ತೆಗೆದುಕೊಂಡು ಬಂದಿದ್ದೀರಿ. ನಾವೂ ಕೂಡ ಆ ಕಡೆ ಕುಳಿತು ಕೆಲಸ ಮಾಡಿದ್ದೇವೆ. ಆಧರ ಬಗ್ಗೆ ತಾವು ಬೆಳಕು ಚೆಲ್ಲಿ. ನಾಳೆ ಮಧ್ಯಾಹ್ನವೋ, ಸಾಯಂಕಾಲವೋ ಉತ್ತರ ಕೊಡುವಾಗ ಹೇಳುತ್ತೇನೆ. ಇನ್ನು 24 ಗಂಟೆಯೊಳಗೆ ರಾಜ್ಯದಲ್ಲಿ ಯಾವುದೋ ಉತ್ತರ ಕೊಡುವಾಗ ಹೇಳುತ್ತೇನೆ. ಇನ್ನು 24 ಗಂಟೆಯೊಳಗೆ ರಾಜ್ಯದಲ್ಲಿ ಯಾವುದೇ ಪಂಚಾಯಿತಿ ಚುನಾವಣಎಗಳು ಯಾವುದೇ ಸೊಸೈಟಿ ಚುನಾವಣೆಗಳು, ಯಾವುದೇ ನಗರ ಪಾಲಿಕೆ ಚುನಾವಣೆ ನಡೆದು ದುರ್ಬಲ ವರ್ಗದವರಿಗೆ, ಬಲಹೀನರಿಗೆ ಈ ಪಕ್ಷ ಇವತ್ತು ಅಧಿಕಾರಕ್ಕೆ ಬಂದು ಪಟ್ಟಭದ್ರ ಹಿತಾಸಕ್ತಿಗಳಿಗೆ ಬೆಂಬಲಿಸುತ್ತದೆ ಎನ್ನುವ ಅಪ್ರಹೆನ್‌ಷನ್ ದಯಮಾಡಿ ಬೇಡ. 9 ರಾಜಕೀಯ ಕೊಲೆಗಳು ಆಗಿವೆಯೋ 10ಕೊಲೆಗಳು ಆಗಿವೆಯೋ ಎಂಬ ಬಗ್ಗೆ ನಾನು ಮಾಹಿತಿ ತರಿಸಿಕೊಳ್ಳುತ್ತೇನೆ. ಯಾವ ಹಿನ್ನೆಲೆಯಿಂದ ಕೊಲೆಯಾಗಿದೆ, ಯಾವ ಕಾರಣಕ್ಕಾಗಿ ಕೊಲೆಯಾಗಿದೆ ಎಂಬ ಬಗ್ಗೆ ಎಲ್ಲಾ ವಿವರಗಳನ್ನು ಇಲ್ಲಿ ಇಡುತ್ತೇನೆ. ಅದಾದ ನಂತರ ಸಭೆಯು ಒಂದು ತೀರ್ಮಾನಕ್ಕೆ ಬರಬಹುದು. ನಾನು ಇಷ್ಟೇ ಹೇಳುತ್ತೇನೆ. ಇದನ್ನು ಮುಚ್ಚಿಹಾಕುವಂಥ ಪ್ರಯತ್ನ ಇಲ್ಲ. ಅದು ಯಾವುದೇ ಪಕ್ಷದವರು ಇರಲಿ, ಯಾವುದೇ ವರ್ಗಕ್ಕೆ ಸೇರಿದವನು ಇರಲಿ, ಅವರು ಮಾಡಿರುವ ತಪ್ಪನ್ನು ಮುಚ್ಚಿ ಹಾಕುವಂಥ ಪ್ರಯತ್ನವನ್ನು ಈ ಸ್ಥಾನದಲ್ಲಿ ಕುಳಿತು ನಾನು ಮಾಡಲಿಕ್ಕೆ ಸಿದ್ಧನಿಲ್ಲ ಎನ್ನುವ ಒಂದೇ ಒಂದು ಭರವಸೆಯನ್ನು ಕೊಡುತ್ತೇನೆ. ಸರ್ಕಾರ ಪ್ರತಿಯೊಂದು ವಿಷಯದ ಬಗ್ಗೆ ಅದರಲ್ಲೂ ಕಾನೂನು ಬಗ್ಗೆ ಹೇಳುದಾದರೆ ಲಾ-ಅಂಡ್ ಆರ್ಡರ್ ಪರಿಸ್ಥಿತಿ ಬಗ್ಗೆ. ಮತ್ತು ಜಾತಿಯ ಆಧಾರದ ಮೇಲೆ, ಯಾವುದೇ ವರ್ಗದ ಮೇಲೆ ಪಟ್ಟಭದ್ರ ಹಿತಾಸಕ್ತಿಗಳು ಇವೆಯೆಂದು ನಾನು ಕೇಳಿದ್ದೇನೆ. ಕಾನೂನು, ಕಾನುನೆ. ತಪ್ಪನ್ನು ಯಾವುದೇ ಮೇಲ್ಜಾತಿಯವರು ಮಾಡಿರಲಿ, ಕೀಳುಜಾತಿಯವನು ಮಾಡಿರಲಿ ಕಾನೂನು ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ದುರ್ಬಲರಿಗೆ ನಾವು ಎಲ್ಲಿ ಶಕ್ತಿ

ತುಂಬಬೇಕಾಗುತ್ತದೆದೆಂದು, ಅವರು ಆರ್ಥಿಕವಾಗಿ ಬೆಳೆಯಲಿಕ್ಕೆ, ಸಮಾಜದಲ್ಲಿ ಅವರೂ ತಲೆ ಎತ್ತಿ ನಿಲ್ಲಲ್ಲಿಕೆ ಯಾವಶಕ್ತಿ ತುಂಬಬೇಕೆನ್ನುವ ಅರಿವು ನನಗಿದೆ. ಅದರ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಳ್ಳುತ್ತದೆ. ಕಾನೂನು ವಿಷಯದಲ್ಲಿ, ಲಾ ಅಂಡ್ ಆರ್ಡರ್ ವಿಷಯಲ್ಲಿ ಇವತ್ತು ಯಾರೇ ತಪ್ಪು ಮಾಡಿರಲಿ, ಯಾವುದೇ ಪಕ್ಷದವವು ತಪ್ಪು ಮಾಡಿರಲಿ ಅದಕ್ಕೆ ಪಕ್ಷದ ರಾಜಕಾರಣವನ್ನು ತರದೆ ಕ್ರಮ ತೆಗೆದುಕೊಳ್ಳಲಿಕ್ಕೆ ನಾವು ಬದ್ಧ ಇದ್ದೇವೆ ಎನ್ನುವ ಮಾತನ್ನು ಹೇಳಿ ಈ ಎಲ್ಲಾ ಅಪಾದನೆಗಳಿಗೆ ನಾನು ಸವಿಸ್ತಾರವಾಗಿ ಉತ್ತರ ಕೊಡಬೇಕಾದರೆ ಮಾಹಿತಿ ತರಿಸಬೇಕಾಗುತ್ತದೆ. ನಾಳಿ ದಿವಸ ಉತ್ತರ ಹೇಳುತ್ತೇನೆಂದು ಏಕೆ ಹೇಳಿದೆಂದರ, ಇವತ್ತಿನ ಸಾಯಂಕಾಲವೇ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬಹುದು. ಆದರೆ ಅದು ನನಗೆ ಇಷ್ಟವಿಲ್ಲ. ಕಾರಣ ಇಷ್ಟೇ ಪ್ರತಿಯೊಂದಕ್ಕೂ ವಿವರಣೆ ಬೇಕು. ಇದರಲ್ಲಿ ಯಾರು ಯಾರಿದ್ದಾರೆ? ಯಾವ ಪಕ್ಷದವರಿದ್ದಾರೆ? ಬಿ.ಜೆ.ಪಿ. ಯವರು ಮಾಡಿದ್ದಾರೆ. ದಳದವರು ಮಾಡಿದ್ದಾರೆ. ಕಾಂಗ್ರೆಸ್‌ನವರು ಮಾಡಿದ್ದಾರೆಂದು ಪಕ್ಷದ ರಾಜಕಾರಣ ಮಾಡುವ ಬದಲಾಗಿ ಆ ಸಂಘರ್ಷ ಹೇಗಾಯಿತೆಂಬ ಬಗ್ಗೆ ಎಲ್ಲಾ ವಿವರಣೆಯನ್ನು ತಮ್ಮ ಮುಂದೆ ಇಡುತ್ತೇನೆ. ಅದಕ್ಕಾಗಿ ದಯಮಾಡಿ ಅವಕಾಶ ಕೊಡಿ. ಮುಂದೆ ಪಂಚಾಯಿತಿ ಚುನಾವಣೆ ನಡೆಯವಾಗ ಆಗಲೀ, ಅಥವಾ ಮತ್ತೊಂದು ಚುನಾವಣೆ ನಡೆಯುವಾಗ ಆಗಲೀ ಯಾರೂ ಕೂಡ ಮತವನ್ನು ಹಾಕಲಿಕ್ಕೆ ಹೋಗದಂಥ ವಾತಾವರಣ ನಿರ್ಮಾಣ ಮಾಡಲಿಕ್ಕೆ ಈ ಸರ್ಕಾರ ಬಿಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಆದ್ದರಿಂದ ಸರ್ಕಾರದ ಮೇಲೆ ದಯಮಾಡಿ ವಿಶ್ವಾಸ ಇಡಿ. ನಾವು ಇದರ ಬಗ್ಗೆ ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಖಂಡಿತಾ ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲ. 6 ಜನವೋ, 8 ಜನವೋ, 5 ಜನವೋ, ಯಾರನ್ನು ಕೊಲೆ ಮಾಡಲಾಯಿತು? ಏಕೆ ಕೊಲೆ ಮಾಡಲಾಯಿತು? ಎಂಬ ಜಿಲ್ಲಾ ಮಾಹಿತಿಗಳನ್ನು ಸಭೆಯ ಮುಂದಿಡುತ್ತೇನೆ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಸುದೀರ್ಘವಾಗಿ ಪ್ರತಿಯೊಂದು ಘಟನೆಗಳ ಬಗ್ಗೆ ಯಾವುದೇ ಮುಚ್ಚುಮರೆ ಇಲ್ದೆ ಉತ್ತರ ಕೊಡುವುದ್ಕಕೆ ಇಷ್ಟಪಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್: ತಮ್ಮ ವಿವರಣೆಯು ರೆಕಾರ್ಡ್‌ಗೆ ಹೋಗಿರುವುದರಿಂದ ಇದನ್ನು ಹೇಳಬೇಕಾಗಿದೆ. ನಾನು ಸಮಸ್ಯೆಗಳನ್ನು ಲಘುವಾಗಿ ಹೇಳಿಲ್ಲ. 'ಮಳೆ ನಿಂತರೂ ಮರದ ಹನಿ ನಿಂತಿಲ್ಲ' ಎನ್ನುವುದು ಕನ್ನಡದಲ್ಲಿ ಇರುವ ಗಾದೆ. ಇದು ದಂತ ಕತೆ ಅಲ್ಲ. ತಾವು ಸ್ವಲ್ಪ ಭಾಷೆಯನ್ನು ಅರ್ಥ ಮಾಡಿಕೊಳ್ಳಬೇಕು. ಗಂಭೀರವಾಗಿ ಇರುವುದು ನನಗೂ ಗೊತ್ತಿದೆ. ಮಾನ್ಯ ಸದಸ್ಯರೂ ತಿಳಿದುಕೊಳ್ಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೆ, ನಾವು ಹೇಳಿದ ಮೇಲೆ ಅವರು ಒಪ್ಪಿಕೊಂಡು ಪ್ರತ್ಯೇಕವಾಗಿ ಇದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಗೌರ್ನರ್ ಭಾಷಣದ ಬಗ್ಗೆ ಮಾತನಾಡುವುಗಲೀ ಎಲ್ಲಾ ವಿಷಯಗಳನ್ನು ತಿಳಸಬೇಕು. ಇದಕ್ಕಾಗಿ ಪ್ರತ್ಯೇಕವಾಗಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಇದು ಲಾ ಅಂಡ್ ಆರ್ಡರ್ ಪ್ರಶ್ನೆ ಇದೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಇದು ಲಾ ಅಂಡ್ ಆರ್ಡರ್ ಪ್ರಶ್ನೆ ಅಲ್ಲ. ಸಮಾಜದಲ್ಲಿ ಘರ್ಷಣೆ ನಡೆದಿದೆ. ಇದಕ್ಕೆ ಯಾರ ಕುಮ್ಮಕ್ಕು ಇದೆ ಎನ್ನತಕ್ಕಂಥಾದ್ದನ್ನು ತಿಳಿದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಜುಡಿಷಿಯಲ್ ಪ್ರೋಬ್ ಮಾಡಿ ಎಂದು ನಾವು ಹೇಳತಕ್ಕಂಥಾದ್ದು. ಕೇವಲ 8 ಮರ್ಡರ್, 9 ಮರ್ಡರ್ ಆಗಿವೆ ಎನ್ನತಕ್ಕಂಥ ಪ್ರಶ್ನೆ ಎಲ್ಲ. ಒಂದು ತಿಂಗಳು ಚುನಾವಣೆ ನಡೆಯಿತು. ಮರ್ಡರ್‌ಗಳು ಆಗಲಿಲ್ಲ; ಘರ್ಷಣೆಗಳು ಆಗಲಿಲ್ಲ, ಗುಂಪು ಘರ್ಷಣೆಗಳು ಆಗಲಿಲ್ಲ. ಹೊಡೆದಾಟಗಳು ಆಗಲಿಲ್ಲ. ಲೂಟಿಗಳು ಆದರೆ ಚುನಾವಣೆ ಆದ ನಂತರ ಮತ್ತು ತಾವು ಅಧಿಕಾರ ವಹಿಸಿಕೊಂಡ ಮೇಲೆ ಇದು ಏಕೆ ಆಗಬೇಕು? ಇದಕ್ಕೆ ಏನು ಕಾರಣ? ಇದು ಲಾ ಅಂಡ್ ಆರ್ಡರ್ ಸಿಚುಯೇಷನ್? ಈ ಅಧಿಕಾರಿಗಳು ಆವಾಗಲೂ ಇದ್ದರು. ತಾವು ಅಧಿಕಾರ ವಹಿಸಿಕೊಂಡ ಮೇಲೂ ಅದೇ ಅಧಿಕಾರಿಗಳು ಇದ್ದಾರೆ. ಅದಕ್ಕಾಗಿ ಲಾ ಅಂಡ್ ಆರ್ಡರ್ ಪ್ರಶ್ನೆ ಇಲ್ಲಿ ತೆಗೆದುಕೊಳ್ಳಬಾರದು, ಬೇಕಾದರೆ ಗೌರ್ನರ್

ಸ್ಪೀಚ್‌ನಲ್ಲೆ ಮಾತನಾಡಿ ಎಂದರೆ ಅಷ್ಟು ಸಮಂಜಸವಾಗುವುದಿಲ್ಲ. ಆದ್ದರಿಂದ ದಯವಿಟ್ಟು ಇದರ ಹಿನ್ನಲೆ ಏನಿದೆ? ಯಾರ ಯಾರ ಕುಮ್ಮಕ್ಕು ಇದೆ? ಏಕೆ ಈ ಸಮಾಜದಲ್ಲಿ ಈ ರೀತಿಯಾಗಿ ಬದಲಾವಣೆ ಆಯಿತು? ಏಕೆ ಈ ರೀತಿಯಾಗಿ ಜನರ ಹತ್ತಿರ ಭಯ ಭೀತಿಯಿಂದ ವರ್ತನೆ ಮಾಡುತ್ತಿದ್ದಾರೆ? ಅವರು ಚುನಾವಣೆ ನಾಳೆ ಬರುತ್ತದೆಯೇ ಎನ್ನುವುದನ್ನು ಕೇಳಿದ್ದಾರೆ. ಇದು ಅವರ ಪ್ರಶ್ನೆ ಅಲ್ಲ. ಚುನಾವಣೆ ಒಂದು ತಿಂಗಳಲ್ಲಿ ಬರಬಹುದು, ಎರಡು ತಿಂಗಳಲ್ಲಿ ಬರಬಹುದು, ಆರು ತಿಂಗಳಲ್ಲಿ ಬರಬಹುದು, ಆದರೆ ಜನರಿಗೆ ಒಂದು ಮೆಸೇಜ್ ಹೋಗಬೇಕಲ್ಲಾ? ಈ ಸರ್ಕಾರ ನಿಷ್ಪಕ್ಷಪಾತದಿಂದ ನಡೆದುಕೊಳ್ಳುತ್ತದೆ. ಇನ್ನು ಮೇಲೆ ಇಂಥ ಗಲಭೆಗಳು ಆಗುವುದಿಲ್ಲ, ಇನ್ನು ಮೇಲೆ ಇಂಥಾ ಕೊಲೆಗಳು ಆಗುವುದಿಲ್ಲ, ಇನ್ನು ಮೇಲೆ ಇಂಥ ಲೂಟಿಗಳು ಆಗುವುದಿಲ್ಲ ಎನ್ನುವ ವಾತಾವರಣವನ್ನು ತಾವು ತಯಾರು ಮಾಡಿದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಚುನಾವಣೆ ಸಮಯದಲ್ಲಿ ಗಲಭೆಗಳು ಏಕೆ ಆಗಲಿಲ್ಲ? ಆಗ ಆಗಬಹುದಾಗಿತ್ತು. ಆಗ ಚುನಾವಣೆ ಶಿಸ್ತಿನಿಂದ ನಡೆಯಿತು. ಅದೇ ಅಧಿಕಾರಿಗಳು ಇದ್ದರು. ಅದೇ ಜನ ಇದ್ದರು, ಅದೇ ಸಬ್ ಇನ್ಸ್‌ಪೆಕ್ಟರ್ ಇದ್ದರು, ಅದೇ ಸರ್ಕಲ್ ಇನ್ಸ್‌ಪೆಕ್ಟರ್ ಇದ್ದರು.

ಶ್ರೀ ಹೆಚ್.ಡಿ. ದೇವೇಗೌಡ: ಚುನಾವಣಾ ಸಮಯದಲ್ಲಿ ಶಿಸ್ತನ್ನು ಕಾಪಾಡುವುದಕ್ಕೆ ಶೇಷನ್‌ರವರು ಎಷ್ಟು ಜನರನ್ನು ಕಳುಹಿಸಿಕೊಟ್ಟಿದ್ದರೆಂದು ತಾವು ತಿಳಿದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅದನ್ನು ತಾವು ಮಾಡಿ. ರಾಜಕೀಯ ಕೊಲೆಗಳ ಬಗ್ಗೆ, ಲೂಟಿಗಳ ಬಗ್ಗೆ, ಡೀಟೇಲ್ ಆಗಿ ಜುಡಿಷಿಯಲ್ ಪ್ರೋಬ್ ಮಾಡಿಸಬೇಕು ಮತ್ತು ಈ ಪಂಚಾಯತ್ ಎಲೆಕ್ಷನ್‌ನಲ್ಲಿ ಇದು ಆಗುತ್ತದೆಂದು ನಾನು ಏಕೆ ಹೇಳುತ್ತಿದ್ದೇನೆಂದರೆ, ತಾವು ಈಗಲೇ ಮೆಸೇಜ್ ಕೊಡದಿದರೆ ಜನರಿಗೆ ಧೈರ್ಯ ಬರುವುದಿಲ್ಲ. ಯಾವ ಪಕ್ಷವೂ ಸ್ವತಂತ್ರವಾಗಿ ಚುನಾವಣೆಗೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಈ ಚರ್ಚೆಗೆ ಅವರು ಅವಕಾಶ ಮಾಡಿಕೊಡಬಾರದು ಅನ್ನತಕ್ಕಂಥ ಏನು ಧೋರಣೆ ತಾಳಿದ್ದಾರೆ. ಇದನ್ನು ನಾವು ಖಂಡಿಸುತ್ತೇವೆ ಮತ್ತು ಇದಕ್ಕೆ ಜುಡಿಷಿಯಲ್ ಪ್ರೋಬ್ ಡಿಮ್ಯಾಂಡ್ ಮಾಡುತೇವೆ. ಅವರು ಇದಕ್ಕೆ ಒಪ್ಪಬೇಕು. ಒಂದು ವೇಳೆ ಒಪ್ಪದೇ ಇದ್ದರೆ ನಮ್ಮ ನಿಲುವು ಇದೆ, ನಾವು ವಾಕ್‌ಔಟ್ ಮಾಡುತ್ತೇವೆ ಎಂದು ಹೇಳಿ ಹೋಗುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಪ್ರಾರಂಭದಲ್ಲಿ ಮಾನ್ಯ ಸಭಾ ನಾಯಕರು ಪ್ರಸ್ತಾಪ ಮಾಡುತ್ತಾ ಏನು ಹೇಳಿದರು ಅಂದರೆ, ನಾಳೆನೋ ಅಥವಾ ಇನ್ನು ಎರಡು ದಿವಸಗಳಲ್ಲಿ ವಿವರವಾದ ಮಾಹಿತಿ ತರಿಸಿಕೊಳ್ಳುತ್ತೇವೆ. ತರಿಸಿ ಸದನದಲ್ಲಿ ಇಡುತ್ತೇವೆ ಎಂದು ಹೇಳಿದ್ದಾರೆ. ಸ್ವಾಭಾವಿಕವಾಗಿ ನಾನು ಒಪ್ಪುತ್ತೇನೆ ಇಲ್ಲ ಎಂದು ಹೇಳುವುದಿಲ್ಲ. ಇವತ್ತು ಕೆಲವು ಮಾಹಿತಿಗಳನ್ನು ನಾವು ಕೊಟ್ಟಿದ್ದೇವೆ. ಅದರ ಆಧಾರದ ಮೇಲೆ ಅಥವಾ ಅವರಿಗೆ ಬಂದಂತಹ ಮಾಹಿತಿಯನ್ನು ಇಡುತ್ತಾರೆ. ಅವರಿಗೆ ಗೊತ್ತಿದೆ. ರಾಜ್ಯಪಾಲರ ಭಾಷಣ ಎಂದರೆ ವಿಶೇಷವಾಗಿ ನೀತಿ ನೀರೂಪಣೆಗೆ ಸಂಬಂಧಪಟ್ಟದ್ದೇ ವಿನಹ, ಇದು ಡಿಮಾಂಡ್ ಮೇಲೆ ಚರ್ಚೆ ಮಾಡತಕ್ಕ ವಿಷಯ ಇದ್ದರೆ ನಾನು ಒಪ್ಪುತ್ತಿದ್ದೆ. ಒಂದೊಂದು ಇಲಾಖೆಯನ್ನು ಪ್ರತ್ಯೇಕವಾಗಿ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಆ ಇಲಾಖೆಗೆ ಸಂಬಂಧಪಟ್ಟ ವಿವರವನ್ನು ಹೇಳುವುದಕ್ಕೆ ಆಯಿತು. ರಾಜ್ಯಪಾಲರ ಭಾಷಣದಲ್ಲಿ ಯಾರೂ ಕೂಡ ಡಿಮ್ಯಾಂಡ್ ಮೇಲೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಸ್ಟೇಟ್‌ಮೆಂಟನ್ನು ಅವರು ಇಟ್ಟರೆ ಆ ಸ್ಟೇಟ್‌ಮೆಂಟಿನ ಮೇಲೆ ಪ್ರತ್ಯೇಕವಾಗಿ ಚರ್ಚೆ ಮಾಡಿದರೆ ಅವಾಗ ಅನೇಕ ವಿಷಯಗಳು ಹೊರಗೆ ಬರುತ್ತವೆ. ಅವರೂ ಕೂಡ ಅದಕ್ಕೆ.....

ಅಧ್ಯಕ್ಷರು: ಅವರು ವಾಕ್‌ಔಟ್‌ಗೆ ಸಿದ್ಧರಾಗಿ ಬಿಟ್ಟಿದ್ದಾರೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈ ವಿಚಾರದ ಮೇಲೆ ವಿಶೇಷವಾದ ಚರ್ಚೆಗೆ ಅವಕಾಶವನ್ನು ಅವರು ಮಾಡಿಕೊಡುತ್ತಾ ಇಲ್ಲ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ, ಎಲ್ಲಾ ಪ್ರಸ್ತಾವನೆಯನ್ನು ಅಲ್ಲಿ ತನ್ನಿ ಅಲ್ಲೇ ವಿವರಗಳನ್ನು ನಾವು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಅವರ ಯಾವ ನಿಲುವು ಇದೆ, ಇದನ್ನು ನಾವು ಖಂಡಿಸಿ ನಾವೆಲ್ಲರೂ ವಾಕ್‌ಔಟ್ ಮಾಡುತ್ತೇವೆ.

ಶ್ರೀ ಹೆಚ್.ಎನ್. ನಂಜೇಗೌಡ: ಮಾನ್ಯ ಖರ್ಗೆಯವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ವಾಕ್‌ಔಟ್ ಸರಕಾರದ ವಿರುದ್ಧವೋ ಸ್ಪೀಕರ್ ವಿರುದ್ಧವೋ ಎಂಬುದನ್ನು ತಿಳಿಸಬೇಕು.

(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್(ಐ) ಪಕ್ಷದ ಸದಸ್ಯರುಗಳವರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಬಿ. ಶಿವಪ್ಪ: ಮಾನ್ಯ ಅಧ್ಯಕ್ಷರೇ, ಅವರು ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಇಡೀ ದೇಶದಲ್ಲಿ ರಕ್ತವನ್ನು ಹರಿಸಿದ್ದಾರೆ ಎಂಬ ಮಾತನ್ನು ಹೇಳಿದ್ದಾರೆ. ಇದು ನಮಗೆ ತುಂಬಾ ನೋವನ್ನು ಉಂಟು ಮಾಡಿದೆ. ಆ ಮಾತುಗಳು ರಿಕಾರ್ಡ್‌ನಲ್ಲಿ ಇದೆ. ಅದನ್ನು ದಯಮಾಡಿ ರಿಕಾರ್ಡ್‌ನಿಂದ ತೆಗೆಸಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲವಾದರೆ ಮಾಜಿ ಮುಖ್ಯ ಮಂತ್ರಿಯವರು ಅದನ್ನು ಪ್ರೂವ್ ಮಾಡಬೇಕು. ಯಾರ ಕಾಲದಲ್ಲಿ ಈ ದೇಶದಲ್ಲಿ, ರಾಜ್ಯದಲ್ಲಿ ರಕ್ತ ಹರಿಯಿತು ಎಂದು ಮಾಜಿ ಮುಖ್ಯಮಂತ್ರಿಯವರು ಹೇಳಬೇಕಾಗುತ್ತದೆ. ಈ ರಾಜ್ಯದ ಜನರು ತೀರ್ಮಾನ ಮಾಡಿದ್ದಾರೆ. 170ನ್ನು 35ಕ್ಕೆ ತಂದಿದ್ದಾರೆ. 4ನ್ನು 40ಕ್ಕೆ ತಂದಿದ್ದಾರೆ. ಅಂದಮೇಲೆ ಗುರುತರವಾದಂಥ ಅಪಾದನೆಯನ್ನು ಸದನದಲ್ಲಿ ಮಾಡಿರತಕ್ಕಂಥಾದ್ದನ್ನು ರಿಕಾರ್ಡ್‌ನಲ್ಲಿ ಇಡುವುದನ್ನು ನಾನು ಇಷ್ಟಪಡುವುದಿಲ್ಲ. ಅದನ್ನು ಕಡತದಿಂದ ವಾಪಸ್ ತೆಗಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ವಿಚಾರದ ಬಗ್ಗೆ ಆಗುತ್ತಾ ಇರತಕ್ಕಂಥ ಚರ್ಚೆ ಇದು. ಇಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಚುನಾವಣೆ ಸಂದರ್ಭದಲ್ಲಿ ಆಗಿರತಕ್ಕಂಥ ಗಲಭೆಗಳು ಏನು ಇವೆ, ಅವುಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರು ಏನು ಒತ್ತಾಯ ಮಾಡುತ್ತಾ ಇದ್ದಾರೆ, ಅದು ಸರಿ ಎಂದು ನನಗನ್ನಿಸುತ್ತದೆ. ಆ ಬಗ್ಗೆ ಚರ್ಚೆ ಮಾಡುಲು ಅವಕಾಶವನ್ನು ಕೊಡುತ್ತೀರೋ, ಬಿಡುತ್ತೀರೋ ಎಂಬುದು ತಮಗೆ ಸೇರಿದ್ದುದು. ಇಂಥ ಸಂದರ್ಭದಲ್ಲಿ ತಮ್ಮ ಸೋಲನ್ನು....

ಅಧ್ಯಕ್ಷರು: ಮಾನ್ಯ ಈಶ್ವರಪ್ಪನವರಲ್ಲಿ ವಿನಂತಿ ಏನೆಂದರೆ, ಈ ವಿಚಾರಗಳನ್ನು ವಾಕ್‌ಔಟ್ ಮಾಡಿದವರು ಪುನಃ ಇಲ್ಲಿ ಬಂದ ಮೇಲೆ ಪ್ರಸ್ತಾಪ ಮಾಡಿದರೆ ಚೆನ್ನಾಗಿರುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ವಾಕ್‌ಔಟ್ ಮಾಡಿದವರೂ ಕೂಡ ಬಂದ ಮೇಲೆ ಹೇಳಿದರೆ ಅವರೂ ಕೇಳಿಸಿಕೊಳ್ಳಲಿ.....

ಶ್ರೀ ಬಿ.ಬಿ. ಶಿವಪ್ಪ: ನಾನು ಆಗನಿಂದಲೂ ಕೈ ಎತ್ತುತ್ತಾ ಇದ್ದೇನೆ – ಅವಕಾಶ ಸಿಗಲಿಲ್ಲ....

ಅಧ್ಯಕ್ಷರು: ಮಾನ್ಯ ಶಿವಪ್ಪನವರು ಹಿರಿಯ ಸದಸ್ಯರು. ತಮ್ಮನ್ನು ನಾನು ಆಗಿನಿಂದ ಗಮನಿಸಿದ್ದೇನೆ. ತಮ್ಮನ್ನು ಗಮನಿಸದೇ ಇರುವಂಥ ಪ್ರಶ್ನೆಯೇ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಅವರು ನಮ್ಮ ಪಕ್ಷದ ಮೇಲೆ ಹಾಕಿದಂಥ ಆರೋಪವನ್ನು ತಾವು ದಯಮಾಡಿ ಕಡತದಿಂದ ತೆಗೆದು ಹಾಕಬೇಕೆಂದು ನಮ್ಮ ಪ್ರಾರ್ಥನೆಯಾಗಿದೆ. ಬೇರೆ ಏನೂ ಇಲ್ಲ. ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು, ಬಿಡುವುದು ನಿಮಗೆ ಸೇರಿದ್ದುದು.

ಶ್ರೀ ಜೆ. ಹೆಚ್. ಪಟೇಲ್:– ಮಾನ್ಯ ಸದಸ್ಯರಾದಂಥ ಬಿ.ಬಿ. ಶಿವಪ್ಪನವರು ಹೇಳಿದ್ದುದು ಸೂಕ್ತ

ಎನಿಸಿದರೆ ತಾವು ಆ ಶಬ್ದಗಳನ್ನು ಕಡತದಿಂದ ತೆಗೆದುಹಾಕಬಹುದು. ಇವೊತ್ತು ಮಾನ್ಯ ಸದಸ್ಯರುಗಳು ಯಾರು ವಾಕ್‌ಔಟ್ ಮಾಡಿದ್ದರೋ ಅವರನ್ನು ಜನರು ಚುನಾವಣೆಯಲ್ಲಿ ವಾಕ್‌ಔಟ್ ಮಾಡಿಸಿದ್ದಾರೆ. ಆದ್ದರಿಂದ ಅದರ ಬಗ್ಗೆ ಏಕೆ ನೀವು ಯೋಚನೆ ಮಾಡುತ್ತಿದ್ದೀರಿ ? ಸ್ವಲ್ಪ ವಾಕ್‌ಇನ್ ಆಗಿರುವವರ ಬಗ್ಗೆ ಅಂದರೆ ನಿಮ್ಮ ಬಗ್ಗೆ ಸ್ವಲ್ಪ ಯೋಚನೆ ಮಾಡಿ ಮಾತನಾಡಿ.

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯ ಮಂತ್ರಿಯವರು):- ಸನ್ಮಾನ್ಯ ಅಧ್ಯಕ್ಷರೇ, ಭಾರತೀಯ ಜನತಾ ಪಕ್ಷದ ಗೌರವಾನ್ವಿತ ಸದಸ್ಯರಾದ ಶ್ರೀ ಈಶ್ವರಪ್ಪನವರು ಹಾಗೂ ಹಿರಿಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರು ಎತ್ತಿದಂಥ ಕೆಲವು ಆಕ್ಷೇಪಣೆಯ ಪದಗಳ ಬಗ್ಗೆ ತೀರ್ಪು ಕೊಡುವುದು ತಮಗೆ ಬಿಟ್ಟಿದ್ದುದು. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟೀಕರಣ ಮಾಡುತ್ತೇನೆ. ಸರಕಾರವು ಸಭೆಯ ಯಾವುದೇ ನಿಯಮಾವಳಿಗಳಿಗೆ ತದ್ವಿರುದ್ಧವಾದ ನಿಲುವನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಿಲ್ಲ. ಈ ಸದನದಲ್ಲಿ ನಾವು ನಿಯಮಕ್ಕೆ ತಲೆಬಾಗಿ ಕಾರ್ಯಕಲಾಪಗಳನ್ನು ಮಾಡಬೇಕಾಗುತ್ತದೆ. ಇವೊತ್ತು ನಾವು ಇಲ್ಲಿರಬಹುದು. ನಾಳೆ ನೀವು ಇಲ್ಲಿರಬಹುದು. ಇದು ಯಾರಿಗೂ ಶಾಶ್ವತವಲ್ಲ. ನಾನು ವಕೀಲ ಅಲ್ಲ. ನನ್ನ ಅನುಭವದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಕೊಲೆಯ ಮೊಕದ್ದಮೆಗಳ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಿರತಕ್ಕಂಥಾದ್ದು ನನಗೆ ಗೊತ್ತಿಲ್ಲ. ಆದರೆ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಒಂದು ಘಟನೆಯಾಯಿತು. ಕೊಲೆಯ ಘಟನೆಯ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡಬೇಕೆಂದು ಹೇಳಿ ತೀರ್ಮಾನ ಮಾಡಿದ್ದು ಕಾಂಗ್ರೆಸ್ ಸರಕಾರದ ಇತಿಹಾಸದ ದಾಖಲೆಯಲ್ಲಿ ಅದು ನಮೂದಾಗಿದೆ. ಕೊಲೆ ಮೊಕದ್ದಮೆಯನ್ನು ಎಫ್‌ಐಆರ್ ಹಾಕಿ ಇಂಥವನೇ ಕೊಲೆ ಮಾಡಿದ ಎಂದು ಪೋಲೀಸ್ ಅಧಿಕಾರಿ ಬರೆದಂಥ ಒಂದು ಮೊಕದ್ದಮೆಯನ್ನು ನೋಡಿ, ಅದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕೆಂದು ಹೇಳಿದ್ದುದು ಇಡೀ ರಾಷ್ಟ್ರದಲ್ಲಿಯೇ ಮೊದಲನೇ ಬಾರಿಗೆ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ. ಆದರೆ ಕೊಲೆ ಮೊಕದ್ದಮೆಯನ್ನು ಜ್ಯುಡಿಶಿಯಲ್ ಎನ್‌ಕ್ವಾಯರಿಗೆ ಒಳಪಡಿಸಲು ನಾನು ಸಿದ್ಧನಿಲ್ಲ. ಈ ದೇಶದ ಜನರು ತೀರ್ಮಾನ ಮಾಡುತ್ತಾರೆ.

ಏಕೆಂದರೆ ನಾನು ನಿಯಮಾವಳಿಗೆ ತದ್ಧಿರುದ್ಧವಾಗಿ ಹೋಗಲು ಸಿದ್ಧವಾಗಿಲ್ಲ. ಆದರೆ ಏನು 9 ಕೊಲೆಗಳಾಗಿವೆ, ಅದರ ಬಗ್ಗೆ ನ್ಯಾಯಾಂಗ ತನಿಖೆಗೆ ಡಿಮಾಂಡ್ ಮಾಡಿದರು. ನಾನು ಒಪ್ಪಲಿಕ್ಕೆ ಸಾಧ್ಯವಾಗುವುದಿಲ್ಲ. ಕೊಲೆ ಅಪಾದನೆಗೆ ನ್ಯಾಯಾಂಗ ತನಿಖೆ ಸಾಧ್ಯವಿಲ್ಲ ಅಂತಹ ಅವಕಾಶ ನಾವು ಈ ರಾಜ್ಯದಲ್ಲಿ ಕೊಡುವುದಿಲ್ಲ. ಕೊಲೆ ಮೊಕದ್ದಮೆಗಳು ಕಾನೂನು ಪ್ರಕಾರ ಯಾವರೀತಿ ನಿಖಾಲೆ ಆಗಬೇಕೋ ಆ ರೀತಿ ನಿಖಾಲೆ ಆಗಲೇಬೇಕಾಗುತ್ತದೆ. ಇದನ್ನು ನ್ಯಾಯಾಂಗ ವಿಚಾರಣೆಯ ವ್ಯಾಪ್ತಿಯಲ್ಲಿ ತಂದು ಕೊಲೆ ಮಾಡಿದವರಿಗೆ ರಕ್ಷಣೆ ಕೊಡಲು ಈ ಸರ್ಕಾರ ಬಿಡುವುದಿಲ್ಲವೆನ್ನುವ ಮಾತನ್ನು ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕೊನೆಯದಾಗಿ ಒಂದೇ ಒಂದು ಮಾತು. ಏನು ಕೆಲವು ಆಪಾದನೆ ಮಾಡಿದ್ದಾರೆ, ನಾನು ಉತ್ತರ ಹೇಳುವುದಿಲ್ಲ ಎಂದು ಹೇಳಿಲ್ಲ ಸವಿಸ್ತಾರವಾಗಿ ಉತ್ತರ ಕೊಡುತ್ತೇನೆ ಎಂದು ಹೇಳಿದ್ದೇನೆ. ಇನ್ನೂ ಅವರ ಹತ್ತಿರ ಸಾಕಷ್ಟು ಬೆಳಕಿದ್ದರೆ ಚೆಲ್ಲಲ್ಲಿ ಚೆಲ್ಲಿ ಎಂದು ಹೇಳಿದ್ದೇನೆ. ವಜ್ರ ವೈಢೂರ್ಯ ಎಲ್ಲಾ ಹೊತ್ತುಕೊಂಡು ಹೋಗಿರುವ ಮಾಹಿತಿ ಇದ್ದರೆ ಕೊಡಿ ಎಂದು ಹೇಳಿದ್ದೇನೆ. ಆದರೆ ನಾಡಿದ್ದು ಉತ್ತರ ಕೊಡುವುದರೊಳಗೆ ಏನೋ ಆಕಾಶ ಕಳಚಿ ಬಿದ್ದು ಹೋಗುತ್ತದೆಂಬ ಅವರ ನಿಲುವನ್ನು ನಾನು ನಿರಾಕರಣೆ ಮಾಡುತ್ತೇನೆ. ಸರ್ಕಾರ ಯಾವ ಪಕ್ಷಭೇದವಿಲ್ಲದೆ ಯಾವುದೇ ವರ್ಗಕ್ಕೆ ಅನ್ಯಾಯವಾದರೂ ನ್ಯಾಯ ದೊರಕಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ. ತಾವು ಈ ನಿಲುವಳಿ ಸೂಚನೆ ಬಗ್ಗೆ ತಮ್ಮ ತೀರ್ಪು ಕೊಟ್ಟು ಮುಂದಿನ ಕಾರ್ಯಕ್ರಮಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವು ಇವತ್ತು ನಿಲುವಳಿ ಸೂಚನೆ ಕಳಿಸಲಿಲ್ಲ. ಅನೇಕ ವಿಷಯಗಳಿದ್ದವು. ಮೊದಲನೆಯ ದಿವಸವೇ ನಿಲುವಳಿ ಸೂಚನೆಯಿಂದ ಈ ಕಾರ್ಯಕಲಾಪ ಪ್ರಾರಂಭವಾಗಬಾರದೆಂಬ ದೃಷ್ಟಿಯಿಂದ ನಾವು ಮಾಡಲಿಲ್ಲ. ಆದರೆ ಇವತ್ತು ನಾವು ವಾಕ್‌ಔಟ ಮಾಡುವ ಅಗತ್ಯ ಇಲ್ಲ. ಇದರರ್ಥ ಇವತ್ತೇನು ಪೋಲಿಸ್ ದೌರ್ಜನ್ಯ ನಡೆಯುತ್ತಿವೆ ಅವರೇನು ಪ್ರಸ್ತಾಪ ಮಾಡಿದ್ದಾರೆ ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡು ಕೊನೆಯ ಪಕ್ಷ ನೀವಿನ್ನೂ ಅಧಿಕಾರಕ್ಕೆ ಬರುತ್ತಿರುವಾಗಲೇ ಇದು ಪ್ರಾರಂಭವಾಗಿದೆ. ಇದನ್ನು ಕೊನೇಮಾಡಿ. ಜನಕ್ಕೆ ನ್ಯಾಯ ಒದಗಿಸಿಕೊಡುವುದಕ್ಕೆ ಪೋಲಿಸರಿಗೆ ಸರಿಯಾಗಿ ಕೆಲಸ ಮಾಡುವುದಕ್ಕೆ ವಿಶೇಷವಾದ ಗಮನವನ್ನು ತಾವು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:- ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿ 60ರ ಅಡಿ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಇತರೆ 9 ಜನರು ನಿಲುವಳಿ ಸೂಚನೆ ಪ್ರಸ್ತಾಪನೆ ಕಳುಹಿಸಿದ್ದರು. ಪ್ರಾಸ್ತಾವಿಕ ನಿವೇದನೆ ಮಾಡಿಕೊಳ್ಳುವ ಸಂದರ್ಭದಲ್ಲಿ ಅವರ ಮಾತುಗಳನ್ನು ಕೇಳಿದ್ದೇನೆ. ಇದು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟ ವಿಚಾರ. ನಮ್ಮ ನಿಯಮಾವಳಿಗಳ ರೀತ್ಯಾ ನಿಲುವಳಿ ಸೂಚನೆಗೆ ಇದು ಒಳಪಡುವುದಿಲ್ಲ. ಆದ್ದರಿಂದ ನಾನು ನನ್ನ ಅನುಮತಿಯನ್ನು ತಡೆಹಿಡಿದಿದ್ದೇನೆ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಸುದೀರ್ಘವಾದ ಹೇಳಿಕೆ ಕೊಡುತ್ತೇನೆಂಬ ಮಾತನ್ನು ಹೇಳಿರುವ ಹಿನ್ನೆಲೆಯಲ್ಲಿ ಸನ್ಮಾನ್ಯ ಸದಸ್ಯರ ಆತಂಕಕ್ಕೆ ಉತ್ತರ ಕೂಡ ಸಿಗಬಹುದೆಂಬ ಭರವಸೆಯಿಂದ ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡುತ್ತಿದ್ದೇವೆ. ಈಗ ವಿತ್ತೀಯ ಕಾರ್ಯಕಲಾಪ, ಮಾನ್ಯ ಹಣಕಾಸಿನ ಸಚಿವರು. ಒಂದು ನಿಮಿಷ, ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಿ.ಬಿ. ಶಿವಪ್ಪನವರು ಹೇಳಿರುವ ಮಾತನ್ನು ಗಮನದಲ್ಲಿಟ್ಟುಕೊಂಡು ಕಡತಗಳನ್ನು ತರಿಸಿ ನಾನು ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ. ಹಾಗೆಯೇ ನಾನು ಇನ್ನೊಂದು ವಿಚಾರ ಹೇಳುವುದನ್ನು ಮರೆತೆ. ಸನ್ಮಾನ್ಯ ಸದಸ್ಯ ಆರ್. ನಾರಾಯಣ್‌ರವರು ಮಾತನಾಡುವ ಸಂದರ್ಭದಲ್ಲಿ ಸನ್ಮಾನ್ಯ ಉಪಮುಖ್ಯಮಂತ್ರಿಗಳನ್ನು ಕುರಿತಾಗಿ ಬೇಜವಾಬ್ದಾರಿಯ ಮಾತುಗಳನ್ನು ಆಡಿದ್ದಾರೆ ಎಂದು ಹೇಳಿದ್ದಾರೆ. ಅದಕ್ಕೆ ಅವರು ಆಕ್ಷೇಪಣೆ ತೆಗೆದುಕೊಳ್ಳದೇ ಹೋದರೂ ಸದನದ ಕಲಾಪವನ್ನು ನಾವು ನಡೆಸುವ ಸಂದರ್ಭದಲ್ಲಿ ಯಾರೇ ಆಗಲಿ ಅನಪೇಕ್ಷಿತವಾದ ವ್ಯತ್ಯಾಸಗಳನ್ನು ಮಾಡಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಬೇಜವಾಬ್ದಾರಿ ಶಬ್ದಗಳನ್ನು ಅನಿವಾರ್ಯವಾಗಿ ಪ್ರತಿ ಕ್ಷಣ ಉಪಯೋಗಿಸಬೇಕಾಗುತ್ತದೆ. ಒಂದು ಸಲ ಕಡತದಿಂದ ತೆಗೆದುಬಿಟ್ಟರೆ ನಾವು ಮಾತನಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ತಾವು ಮಡಿವಂತಿಕೆ ಮಾಡಬಾರದು ಪದಗಳನ್ನು. ಹಾಗೆ ಮಾಡಿದರೆ ಈ ಸದನ ಸಂಪೂರ್ಣವಾಗಿ ಗೌಪ್ಯವಾಗಿಡಬೇಕಾಗುತ್ತದೆ. ಮಾನ್ಯ ಉಪಮುಖ್ಯಮಂತ್ರಿಗಳು ಕೂಡ ಅದರಿಂದ ಏನೋ ಅಪರಾಧ ಆಯಿತೆಂದು ಅವರೂ ಅಂದುಕೊಂಡಿಲ್ಲ.

ಶ್ರೀ ಜೆ.ಹೆಚ್. ಪಟೇಲ್:- ಏಕೆ ಸುಧಾರಿಸಿಕೊಂಡೆ ಎಂದರೆ ನಾನು ಬೇಜವಾಬ್ದಾರಿ ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ಆ ನಂಬಿಕೆ ನಮಗೂ ಇದೆ. ಆದ್ದರಿಂದ ಈ ಪದಗಳ ಬಗ್ಗೆ .....

ಶ್ರೀ ಹೆಚ್. ಡಿ. ದೇವೇಗೌಡ:- ಮಾನ್ಯ ಅಧ್ಯಕ್ಷರು ಸಲಹೆ ಮಾಡುತ್ತಿದ್ದರು. ಇಂತಹ ಪದಗಳ ಉಪಯೋಗ ಮಾಡಬಾರದೆಂದು ಅವರ ವಿಚಾರ ಇದೆ. ಸರಕಾರ ತೀವ್ರವಾದಂತಹ ಕೀಳು ಮಟ್ಟಕ್ಕೆ ನಡೆದುಕೊಂಡಾಗ ಕೆಲವು ಸಂದರ್ಭದಲ್ಲಿ ಈ ಪದ ಪ್ರಯೋಗ ಮಾಡತಕ್ಕಂಥಾದ್ದು ವಾಡಿಕೆಯಲ್ಲಿ ಇದೆ. ಇಲ್ಲವೆಂದು ನಾನು ವಾದ ಮಾಡುವುದಿಲ್ಲ. ಸರ್ವೇ ಸಾಮಾನ್ಯವಾಗಿ ಕೆಲವು ಪದ ಪ್ರಯೋಗ

ಮಾಡತಕ್ಕಂತಹ ಕಾಲದಲ್ಲಿ ಸಭೆಗೆ ನಾವು ನೀವು ಸೇರಿ ಘನತೆ ಗೌರವ ತರಲಿಕ್ಕೆ ಪ್ರಯತ್ನ ಪಡಬೇಕು. ನಮ್ಮ ಕಡೆಗೂ ಇದು ಅಷ್ಟೆ ಆಗುತ್ತದೆ. ಸರಕಾರ ಕೂಡ ಬೇಜವಾಬ್ದಾರಿಯಿಂದ ನಡೆದುಕೊಳ್ಳಬಾರದೆನ್ನುವ ಶಬ್ದ ನಮಗೂ ಅಷ್ಟೆ ಆಗುತ್ತದೆ. ನಾವು ನಡೆದುಕೊಳ್ಳುವುದರಲ್ಲೂ ಅಥವಾ ಸದನದ ಕಾರ್ಯಕಲಾಪದಲ್ಲಿ ಭಾಗವಹಿಸುವಾಗ ಪದ ಪ್ರಯೋಗ ಮಾಡತಕ್ಕಂತಹ ಕಾಲಗಲ್ಲಿ ಇಂತಹ ಪದಗಳನ್ನು ಆ ಕಡೆ, ಈ ಕಡೆ ಸಾಧ್ಯವಾದ ಮಟ್ಟಿಗೆ ಅವಾಯ್ಡ್ ಮಾಡಬಹುದು. ಅದು ರೂಲಿಂಗ್ ಕೊಡಲಿಕ್ಕೆ ಇಲ್ಲ. ಇಂತಹ ಪದಗಳ ಪ್ರಯೋಗವನ್ನು ಅನಿವಾರ್ಯ ಬಂದಾಗ ಮಾಡಬಹುದು. ಸಾಮಾನ್ಯವಾಗಿ ಬೇಡ ಎನ್ನುವ ದೃಷ್ಟಿಯಿಂದ ಅವರು ಹೇಳಿದ್ದಾರೆ.

ಅಧ್ಯಕ್ಷರು:- ಸಂದರ್ಭೋಚಿತವಾಗಿ ಇದರ ಬಳಕೆಯಾಗಲಿ ಎನ್ನುವುದು ನನ್ನ ಅಭಿಪ್ರಾಯ ಅಷ್ಟೆ.

ಶ್ರೀ ಹೆಚ್.ಎನ್. ನಂಜೇಗೌಡ:- ನನಗೆ ಒಂದು ಆಶ್ಚರ್ಯ. ಮಾನ್ಯ ವೀರಪ್ಪ ಮೊಯಿಲಿಯವರು ಈ ಸದನದ ಸದಸ್ಯರು. ಬಹುಶಃ ನಾನು ಅವರ ಸ್ಥಾನದಲ್ಲಿದ್ದೇನೆ. ಮಾನ್ಯ ಸದಸ್ಯರು ಮಾತನಾಡುತ್ತಾ ನಮ್ಮ ಪಕ್ಷದ ಬಗ್ಗೆ ಪ್ರಸ್ತಾಪ ಮಾಡುವಾಗ ರಕ್ತದ ಕೋಡಿಹರಿಸಿದರು ಎಂದು ಹೇಳಿದರು. He can't afford to be offensive. He is still trying to be offensive. ನನಗೆ ಅದೇ ಆಶ್ಚರ್ಯವಾಗುತ್ತದೆ. ಅವರ ಸ್ಥಾನದಲ್ಲಿ ನಾನು ಇದ್ದೇನೆ. ನಮ್ಮ ಕರ್ನಾಟಕ ಇತಿಹಾಸದಲ್ಲಿ ಒಬ್ಬ ಮುಖ್ಯಮಂತ್ರಿಯನ್ನು ಬೊಟ್ಟು ಮಾಡಿ ಅವರೇ ಪಕ್ಷದವರು ನೀನೇ ಈ ಪಾರ್ಟಿಯನ್ನು ನಿರ್ನಾಮ ಮಾಡುವುದಕ್ಕೆ ಕಾರಣವೆಂದು ಯಾರೂ ಹೇಳಿದ್ದಿಲ್ಲ. ಮಾನ್ಯ ಮೊಯಿಲಿಯವರ ಬಗ್ಗೆ ಆ ಪಾರ್ಟಿಯವರೇ ಹೇಳಿಕೊಂಡಿದ್ದಾರೆ. He has no moral authority to comment on the affairs of others.

MR. SPEAKER: I would allow you to make all the statements when they are present. That would enable me to understand each one of you better.

SRI H.N. NANJE GOWDA: Then also we will make.

## ವಿತ್ತೀಯ ಕಾರ್ಯಕಲಾಪ

### **ಅನುಪೂರಕ ಅಂದಾಜುಗಳನ್ನು ಒಪ್ಪಿಸುವುದು**

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿ):- ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 205(1)ನೇ ಅನುಚ್ಛೇದದ ಮೇರೆಗೆ 1994-95ನೇ ಸಾಲಿಗೆ ಸಂಬಂಧಿಸಿದಂತೆ ಪೂರಕ ಅಂದಾಜು (ಎರಡನೇ ಕಂತು)ಗಳನ್ನು ಸಭೆ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ಮಂಡಿಸಲಾಯಿತು.

## ನಿಯಮ 334ರ ಮೇರೆಗೆ

1. ವಿಷಯ:- ಹಾಲು ಪೂರೈಸಿದ ಮೊತ್ತದ ಬಾಕಿ ನೀಡುವ ಬಗ್ಗೆ.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್):- ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಹಿರೇಕೆರೂರು ತಾಲ್ಲೂಕಿನ ಸಹಕಾರಿ ಹಾಲು ಉತ್ಪಾದಕರ ಸಂಘಗಳಿಗೆ ಅವುಗಳು ಹಾಲು ಪೂರೈಸಿದ ಬಾಬ್ತು ಮೊತ್ತದ ಬಾಕಿಯನ್ನು ಕೆ.ಎಂ.ಎಫ್ ಅವರು ಅನೇಕ